೧. ಹೆಸರು : ಡಾ. ಸಿ.ಆರ್. ಗೋವಿಂದರಾಜು

೨. ಜನ್ಮ ದಿನಾಂಕ : ೨೩ನೇ ಮಾರ್ಚ್ ೧೯೬೮

೩. ವಿದ್ಯಾರ್ಹತೆ : ಎಂ.ಎ., (ಇತಿಹಾಸ)
ಎಂ.ಫಿಲ್ (ಕನ್ನಡ–ಕರ್ನಾಟಕತ್ವ)
ಪಿಎಚ್.ಡಿ (ಕರ್ನಾಟಕದ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ)


೪. ವಿಳಾಸ : ಪ್ರಾಧ್ಯಾಪಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

೫. ಸ್ಥಿರ ದೂರವಾಣಿ ಸಂಖ್ಯೆ : ೦೮೩೯೪ – ೨೩೧೫೪೪೮ (ಮನೆ)
೦೮೩೯೪ – ೨೪೧೩೩೭ (ಕಛೇರಿ/ವಿಭಾಗ)
ಆಂತರಿಕ – ೩೮೪

೬. ಮೊಬೈಲ್ ಸಂಖ್ಯೆ : ೯೪೪೮೧ ೮೩೯೨

೭. ಫ್ಯಾಕ್ಸ್ ಸಂಖ್ಯೆ : ೦೮೩೯೪ – ೨೪೧೩೩೪, ೦೮೩೯೪ – ೨೪೧೩೩೫

೮. ಇ–ಮೇಲ್ ವಿಳಾಸ : **dr.crgora@yahoo.com**


೯. ಕಾರ್ಯನಿರ್ವಹಿಸುತ್ತಿರುವ ವಿಭಾಗ : ಚರಿತ್ರೆ ವಿಭಾಗ

೧೦. ಕಾರ್ಯನಿರ್ವಹಿಸುತ್ತಿರುವ ಹುದ್ದೆ : ಪ್ರಾಧ್ಯಾಪಕ

೧೧. **ವಿಷಯತಜ್ಞತೆ**
೧. ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ ಚರಿತ್ರೆಗಳು (ಪುರಾತತ್ವೀಯ ಅಧ್ಯಯನಗಳನ್ನು ಒಳಗೊಂಡಂತೆ)
೨. ಆಧುನಿಕ ಹಾಗೂ ವಸಾಹತುಶಾಹಿ ಭಾರತದ ಇತಿಹಾಸ
೩. ಭಾರತ ಹಾಗೂ ಕರ್ನಾಟಕದ ಸಾಂಸ್ಕೃತಿಕ ಇತಿಹಾಸ
೪. ಹೊಸ ಚರಿತ್ರೆಗಳು ಹಾಗೂ ನವಚಾರಿತ್ರಿಕತೆ (ಹೊಸ ಪರಿಕಲ್ಪನೆಗಳನ್ನು ಒಳಗೊಂಡಂತೆ)
೫. ಭಾರತ ಹಾಗೂ ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪ ಹಾಗೂ ಪುರಾತತ್ವ
೬. ಕರ್ನಾಟಕದ ಪ್ರಮುಖ ಚಳವಳಿಗಳು

೧೨. **ಅಧ್ಯಯನ ನಡೆಸುತ್ತಿರುವ ಆಸಕ್ತಿಯ ಕ್ಷೇತ್ರಗಳು**
೧. ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ ಭಾರತದ ಚರಿತ್ರೆಗಳು
೨. ವಸಾಹತುಶಾಹಿ ಹಾಗೂ ರಾಷ್ಟ್ರೀಯತೆಯ ಚರಿತ್ರೆಗಳು
೩. ಕರ್ನಾಟಕದ ಏಕೀಕರಣ ಚಳವಳಿ ಹಾಗೂ ಸಮಕಾಲೀನ ಕನ್ನಡ ಚಳವಳಿಗಳು
೪. ಕರ್ನಾಟಕದ ಪುರಾತತ್ವ, ಕಲೆ, ವಾಸ್ತುಶಿಲ್ಪ ಹಾಗೂ ಚಿತ್ರಕಲೆ
೫. ಪ್ರಾಚೀನ, ಮಧ್ಯಕಾಲೀನ, ಆಧುನಿಕ ಕರ್ನಾಟಕದ ಇತಿಹಾಸ
೬. ಕನ್ನಡ ಸಾಹಿತ್ಯ–ಸಂಸ್ಕೃತಿ, ವಸಾಹತೋತ್ತರ ಚಿಂತನೆಗಳು ಹಾಗೂ ನವ ಚಾರಿತ್ರಿಕವಾದ

೧೩. ಯೋಜನೆಗಳ ವಿವರ

**ಪೂರ್ಣಗೊಳಿಸಿದ ಸಾಂಸ್ಥಿಕ ಯೋಜನೆಗಳು**

**೧. ಸಮಗ್ರ ಕರ್ನಾಟಕ ಚರಿತ್ರೆ ಏಳು ಸಂಪುಟಗಳು (೧೯೯೨-೧೯೯೭)**

ಖ್ಯಾತ ಇತಿಹಾಸಕಾರರಾದ ಪ್ರೊ. ಬಿ. ಷೇಕ್ ಅಲಿ ಅವರ ಪ್ರಧಾನ ಯೋಜನೆಯಲ್ಲಿ ಪ್ರಾಕ್ಚಾರಿತ್ರಿಕ ಕಾಲಘಟ್ಟದಿಂದ ಏಕೀಕರಣದವರೆಗೂ ನಾಡಿನ ಚರಿತ್ರೆಯನ್ನು ಮೊಟ್ಟಮೊದಲ ಬಾರಿಗೆ ಒಂದೆಡೆ ಸಂಕಲಿತಗೊಳಿಸಲಾಗಿದೆ. ನಾಡಿನ ಖ್ಯಾತ ವಿದ್ವಾಂಸರು ಈ ಏಳು ಸಂಪುಟಗಳಿಗೆ ಸಂಪಾದಕರಾಗಿ ಹಾಗೂ ಪ್ರತಿ ಅಧ್ಯಾಯಗಳ ಲೇಖಕರಾಗಿ ತಮ್ಮ ಕೊಡುಗೆಗಳನ್ನು ನೀಡಿದ್ದಾರೆ. ಇಂಥ ಯೋಜನೆಗೆ ನಾನು ೧೫.೧೦.೧೯೯೭ರಲ್ಲಿ ಅವು ಪ್ರಕಟ ಆಗುವವರೆಗೂ ಸುಮಾರು ಐದು ವರುಷಗಳ ಕಾಲ ಸಹ-ಸಂಯೋಜಕನಾಗಿ ಕಾರ್ಯನಿರ್ವಹಿಸಿರುತ್ತೇನೆ. ಅಲ್ಲದೆ ಕೆಲವು ಸಂಪುಟಗಳಿಗೆ ಅಧ್ಯಾಯಗಳನ್ನು ಬರೆಯಲಾಗಿದೆ. ಈ ಕೃತಿಗಳು ಹೆಚ್ಚಿನ ಬೇಡಿಕೆಯಿಂದಾಗಿ ಬಹಳ ಬೇಗನೆ ಮುಗಿದು ಹೋಗಿದ್ದು ಗಮನಾರ್ಹ.

**೨. ಚರಿತ್ರೆ ವಿಶ್ವಕೋಶ (೧೯೯೬-೨೦೦೧)**

ನಾಡಿನ ಚರಿತ್ರೆಯಲ್ಲಿ ಹಾಗೂ ಕನ್ನಡದಲ್ಲಿಯೇ ಮೊದಲನೆಯದು ಅನ್ನಿಸಿರುವ 'ಚರಿತ್ರೆಯ ವಿಶ್ವಕೋಶ'ಕ್ಕೆ ಸಹ ಸಂಪಾದಕನಾಗಿ, ಲೇಖಕನಾಗಿ ಕಾರ್ಯನಿರ್ವಹಿಸಲಾಗಿದೆ. ಚರಿತ್ರೆಯ ಜ್ಞಾನಶಿಸ್ತಿನ ಈ ವಿಶ್ವಕೋಶದಲ್ಲಿ ಜಗತ್ತು, ಭೌಗೋಳಿಕ ಉಪಖಂಡಗಳು ಸೇರಿದಂತೆ ಭಾರತ ಉಪಖಂಡ ಹಾಗೂ ಕರ್ನಾಟಕದ ಚರಿತ್ರೆಗಳನ್ನು ನಮೂದಿಸಲಾಗಿದೆ. ಅಲ್ಲದೆ ಚರಿತ್ರೆಯ ವಿಧಿ-ವಿಧಾನ, ಚರಿತ್ರೆ ಲೇಖನಶಾಸ್ತ್ರ ಹಾಗೂ ಆಧುನಿಕ ಪರಿಕಲ್ಪನೆಗಳನ್ನು ಕುರಿತು ಸಂಕಲಿಸಲಾಗಿದೆ. ಡಾ. ಟಿ. ವಿಜಯ ಪೂಣಚ್ಚ ಅವರ ಸಂಪಾದಕತ್ವದಲ್ಲಿ ಈ ಕೋಶ ಬಿಡಿಯಾಗಿಯೂ ಮರುಮುದ್ರಣಗೊಳ್ಳುತ್ತಿರುವುದು ಗಮನಾರ್ಹ.

**೩. ಕನ್ನಡ ಚಳವಳಿಗಳು**

ಏಕೀಕರಣೋತ್ತರ ಕರ್ನಾಟಕದ ಪ್ರಮುಖ ಚಳವಳಿಗಳನ್ನು ಕುರಿತ ಚರಿತ್ರೆ ವಿಭಾಗದ ಈ ಯೋಜನೆ ಸಾಂಸ್ಥಿಕವಾದುದು. ದಲಿತ ಹಿಂದುಳಿದ, ಪರಿಸರ, ಜಲವಿವಾದ, ಗಡಿ, ರೈತ ಚಳವಳಿಗಳ ಜೊತೆಗೆ ಕನ್ನಡ ಚಳವಳಿಗಳನ್ನು ವಿಶೇಷವಾಗಿ ಅಧ್ಯಯನ ಮಾಡಲಾಗಿದೆ. ನಾಡು ನುಡಿ ಅಸ್ಮಿತೆ ಅನನ್ಯತೆಗಳಿಗಾಗಿ ಕನ್ನಡಿಗರು ಸ್ಪಂದಿಸಿದ ರೀತಿ, ಪ್ರತಿಕ್ರಿಯೆ, ಪ್ರತಿಭಟನೆಗಳನ್ನು ಈ ಕೃತಿಯು ಅಧ್ಯಯನ ಮಾಡಿರುವುದು ವಿಶೇಷ. ಅಲ್ಲದೆ ಸಂಘ ಸಂಸ್ಥೆಗಳು ಹಾಗೂ ಹೋರಾಟಗಾರರನ್ನು ಕುರಿತು ವಸ್ತುನಿಷ್ಠವಾಗಿ ಅಭ್ಯಾಸ ಮಾಡಿ ವಿಶ್ಲೇಷಿಸಲಾಗಿರುವ ಸಂಶೋಧನಾ ಕೃತಿ ಎಂಬುದು ಪ್ರಮುಖವಾದ ಅಂಶ.

**೪. ಕರ್ನಾಟಕ ಸಂಸ್ಕೃತಿ ಚರಿತ್ರೆ (ಆರು ಸಂಪುಟಗಳ ಯೋಜನೆ)**

ಪ್ರಾಕ್ಚಾರಿತ್ರಿಕ ಕಾಲಘಟ್ಟದಿಂದ ಇಂದಿನವರೆಗೂ ನಾಡಿನ ಸಾಂಸ್ಕೃತಿಕ ಚಹರೆಗಳನ್ನು ಕುರಿತು ಆರು ಸಂಪುಟಗಳಲ್ಲಿ ಕಾರ್ಯ ನಿರ್ವಹಿಸಿದ ಸಾಂಸ್ಥಿಕ ಯೋಜನೆ. ಏಕೀಕರಣೋತ್ತರ ಕರ್ನಾಟಕದ, ಅದರಲ್ಲೂ ಎಪ್ಪತ್ತರ ದಶಕ ಹಾಗೂ ಸಮಕಾಲೀನ ಸಂದರ್ಭದ ಸಾಂಸ್ಕೃತಿಕ ಆಯಾಮಗಳನ್ನು ಕುರಿತು ಸಂಪುಟ ಆರರಲ್ಲಿ ಅಭ್ಯಾಸ ಮಾಡಲಾಗಿದೆ. ಸಾಹಿತ್ಯ, ಸಂಸ್ಕೃತಿ ವಿಚಾರಗಳನ್ನು ಕುರಿತು ಇಲ್ಲಿ ವಿಶ್ಲೇಷಿಸಿರುವುದು ವಿಶೇಷವಾದುದು.

**ಪೂರ್ಣಗೊಳಿಸಿದ ವೈಯಕ್ತಿಕ ಯೋಜನೆಗಳು**

**೧. ಇತಿಹಾಸ-೧ ಹಾಗೂ ಇತಿಹಾಸ-೨ (೨೦೦೪, ೨೦೦೫)**

ಕರ್ನಾಟಕ ಸರ್ಕಾರದ ಪದವಿಪೂರ್ವ ಶಿಕ್ಷಣ ಇಲಾಖೆಯು ಹೊಸ ಪಠ್ಯಕ್ಕನುಕ್ರಮವಾಗಿ ಮೊದಲ ಹಾಗೂ ಎರಡನೆಯ ವರುಷದ ಪಠ್ಯ ಪುಸ್ತಕಗಳನ್ನು ರಚಿಸಿಕೊಡಲು ವಿಶ್ವವಿದ್ಯಾಲಯವನ್ನು ಕೇಳಿಕೊಂಡಿತ್ತು. ಚರಿತ್ರೆ ವಿಷಯಕ್ಕೆ ಸಂಬಂಧಿಸಿದ ಪ್ರಪಂಚ ಭಾರತ ಹಾಗೂ ಕರ್ನಾಟಕಗಳಿಗೆ ಸಂಬಂಧಿಸಿದ ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ ಸಂದರ್ಭಗಳ ಇತಿಹಾಸದ ಅಧ್ಯಾಯಗಳನ್ನು ಅಳವಡಿಸಿ ಸಂಪಾದಿಸಿಕೊಡಲಾಗಿದೆ. ಲೇಖಕನಾಗಿಯೂ ಕಾರ್ಯನಿರ್ವಹಿಸಿರುವುದು, ಹೊಸ ಬಗೆಯ ಪ್ರಯೋಗವೊಂದನ್ನು ಮಾಡಿರುವುದು ವಿಶೇಷ.

**೨. ಕನ್ನಡಮ್ಮ (೨೦೦೫)**

ಆಧುನಿಕ ಕನ್ನಡ ಕಾವ್ಯವನ್ನು ಪ್ರಧಾನವನ್ನಾಗಿಸಿಕೊಂಡು 'ಕನ್ನಡಮ್ಮ' ಅಥವಾ ಹೆಣ್ಣು ಸಂಕಥನದ ನಾಡು-ನುಡಿ ಪ್ರತೀಕಗಳನ್ನು ಒಂದೆಡೆ ತಂದು ವಿಶ್ಲೇಷಿಸಲಾಗಿದೆ. ಅಲ್ಲದೆ ಕನ್ನಡಿಗರ ಅಧಿದೇವತೆಯಾದ ತಾಯಿ 'ಭುವನೇಶ್ವರಿ'ಯ ಪರಿಕಲ್ಪನೆ ಹಾಗೂ ಭಾರತಮಾತೆಯ ರೂಪಕಗಳನ್ನು ಅಧ್ಯಯನ ಮಾಡಿರುವುದು ಗಮನಾರ್ಹವಾದ ಸಂಗತಿ.

**೩. ಕನ್ನಡ ಚಳವಳಿಗಾರ ಮ.ರಾಮಮೂರ್ತಿ (೨೦೦೦)**

ನಾಡು ನುಡಿಗಳ ಬಗೆಗೆ ಅಪಾರವಾದ ಅಭಿಮಾನವನ್ನು ತಳೆದು ಕನ್ನಡದ ಬಾವುಟವನ್ನೇ ಪರಿಚಯಿಸಿದ ವ್ಯಕ್ತಿತ್ವ ಮ.ರಾಮಮೂರ್ತಿ ಅವರದು. ಇವರ ಹೋರಾಟ, ವ್ಯಕ್ತಿತ್ವಗಳನ್ನು ಕುರಿತ ಮೊದಲ ಅಧ್ಯಯನ ಕೃತಿ.

**೪. ನವಚಾರಿತ್ರಿಕವಾದ (೨೦೦೯)**

ಫ್ರಾನ್ಸ್ ಹಾಗೂ ಅಮೆರಿಕಾಗಳಲ್ಲಿ ಗಂಭೀರವಾದ ಒಳನೋಟಗಳೊಂದಿಗೆ ಚರ್ಚಿತವಾದ 'ನ್ಯೂ ಹಿಸ್ಟಾರಿಸಿಸಂ' ಪರಿಕಲ್ಪನೆಯನ್ನು ಕುರಿತ ಅಧ್ಯಯನ ಕೃತಿ. ಸ್ಟೀಫನ್ ಗ್ರೀನ್‌ಬ್ಲಾಟ್ ಅವರೇ ಹುಟ್ಟು ಹಾಕಿದ ಈ ಪರಿಕಲ್ಪನೆ ಸಾಹಿತ್ಯ ಹಾಗೂ ಸಾಂಸ್ಕೃತಿಕ ಅಧ್ಯಯನಗಳಲ್ಲಿ ಚರ್ಚಿತವಾಗುತ್ತಿರುವುದರ ಬಗೆಗೆ ಅಭ್ಯಾಸ ಮಾಡಲಾದ ಕೃತಿ. ಸಾಂಪ್ರದಾಯಿಕ ನೆಲೆಗಳಿಗೆ ಪರ್ಯಾಯವಾಗಿ ಪ್ರವೇಶಿಸಲು ಹೊಸ ಪರಿಕ್ರಮವೊಂದನ್ನು ಹುಟ್ಟುಹಾಕಿದ 'ನವಚಾರಿತ್ರಿಕವಾದ'ವನ್ನು ಕುರಿತು ಚಿಂತಿಸಿದ ಅಧ್ಯಯನ ಕೃತಿಯೊಂದು ಕನ್ನಡದಲ್ಲಿಯೇ ಮೊದಲನೆಯದು ಎಂಬುದು ವಿಶೇಷ.

## ೧೪. ಪ್ರಗತಿಯಲ್ಲಿರುವ ಯೋಜನೆಗಳು

**೧. ಕರ್ನಾಟಕದ ಸಾಂಸ್ಕೃತಿಕ ಪ್ರತೀಕಗಳು**

ನಾಡು ಹೆಮ್ಮೆಪಟ್ಟುಕೊಳ್ಳಬಹುದಾದ ಪ್ರಮುಖ ರೂಪಕ-ಪ್ರತೀಕಗಳನ್ನು ಆಯ್ಕೆ ಮಾಡಿ ವಿವರಣೆ, ವಿಶ್ಲೇಷಣೆ, ವ್ಯಾಖ್ಯಾನಗಳನ್ನು ಮಾಡಲು ಪ್ರಯತ್ನಿಸುವ ಯೋಜನೆ. ಕನ್ನಡಿಗರು, ಕರ್ನಾಟಕ ಹಾಗೂ ಕನ್ನಡ ಭಾಷೆಗೆ ಚಾರಿತ್ರಿಕವಾಗಿ ದಕ್ಕಿರುವ ಪ್ರತೀಕಗಳನ್ನು ಕುರಿತ ಸಾಂಸ್ಕೃತಿಕ ಅಧ್ಯಯನದ ಮೊದಲ ಪ್ರಯತ್ನ. ಭೌತಿಕ ಹಾಗೂ ಬೌದ್ಧಿಕವಾದ ಎರಡೂ ನೆಲೆಗಳನ್ನು ಪರಿಶೀಲಿಸುವುದು ಇಲ್ಲಿನ ಆಶಯ.

**೨. ಟಿಪ್ಪು ಸಂಕಥನ**

ರಾಷ್ಟ್ರಾಭಿಮಾನದ ಜೊತೆಗೆ ನಾಡು-ನುಡಿಗಳ ಹೆಮ್ಮೆಯ ಸಂಕೇತವಾದ ಕನ್ನಡಿಗ ಟಿಪ್ಪುವನ್ನು ಕುರಿತ ವಿಭಿನ್ನ ಬರೆಹಗಳ ವಿಶ್ಲೇಷಣೆಯ ಯೋಜನೆ. ವಿಭಿನ್ನ ಸಂವೇದನೆಯ ವ್ಯಾಖ್ಯಾನಗಳಲ್ಲಿ ಟಿಪ್ಪು ಕಾಣಿಸಿಕೊಳ್ಳುವ ಪರಿಯನ್ನು ಕುರಿತ ಚಾರಿತ್ರಿಕ ಅಧ್ಯಯನ.

**೩. ಡಾ.ರಾಜ್ ಹಾಗೂ ಚಾರಿತ್ರಿಕ ಸಿನಿಮಾಗಳು**

ಕನ್ನಡದ ಮೇರುನಟ ಡಾ.ರಾಜ್‌ಕುಮಾರ್ ಅವರು ಕರ್ನಾಟಕದ ರಾಜ ಮನೆತನಗಳನ್ನು ಪ್ರತಿನಿಧಿಸಿ ಅಭಿನಯಿಸಿದ ಪಾತ್ರಗಳನ್ನು ಅಧ್ಯಯನಕ್ಕೊಳಪಡಿಸಿದ ಯೋಜನೆ. ಮಯೂರ, ಪುಲಿಕೇಶಿ, ಕೃಷ್ಣದೇವರಾಯ, ಬಸವೇಶ್ವರ ಮೊದಲಾದ ವ್ಯಕ್ತಿತ್ವಗಳನ್ನು ಕನ್ನಡಿಗರಲ್ಲಿ ಕರ್ನಾಟಕದ ಚರಿತ್ರೆಯ ಮುಖೇನ ಸಾಕಾರಗೊಳಿಸಲು ಪ್ರಯತ್ನಿಸಿದ ಪರಿಯನ್ನು ಅಭ್ಯಾಸ ಮಾಡಿದ ಮೊದಲ ಯೋಜನಾ ಕೃತಿ.

**೪. ಅಧಿಚರಿತ್ರೆ**

ಹೇಡನ್‌ವೈಟ್‌ನ ಚಿಂತನೆಗಳೊಂದಿಗೆ ರೂಪುತಳೆದ ಮೆಟಾಹಿಸ್ಟರಿ ಪರಿಕಲ್ಪನೆಯನ್ನು ಕನ್ನಡದ ಸಂದರ್ಭಕ್ಕೂ ಅನ್ವಯಿಸಿನೋಡುವ ಪ್ರಯತ್ನ ಮಾಡಲಾಗಿದೆ.

**೫. ಹೊಸ ಚರಿತ್ರೆಗಳು**

ಚರಿತ್ರೆಯನ್ನು ಏಕಮುಖಿಗೊಳಿಸಿರುವ ನೆಲೆಗಳನ್ನು ಒಡೆದುಹಾಕಿ ಬಹುಮುಖಿ ನೆಲೆಗಳಿಂದ ಪರಿಭಾವಿಸಿದ ಅನೇಕತೆಯನ್ನು ಪರಿಶೀಲಿಸುವ ಯೋಜನೆಯಾಗಿದೆ. ಹೊಸ ಬಗೆಯ ಚರಿತ್ರೆಗಳನ್ನು ಇಲ್ಲಿ ಪರಿಶೀಲಿಸಲಾಗಿದೆ.

**೬. ಸಿನಿಮಾ ಸಂಕಥನ**

ನಾಡೋಜ ಡಾ.ರಾಜಕುಮಾರ್ ಅಧ್ಯಯನ ಪೀಠಕ್ಕಾಗಿ ಪ್ರಶಸ್ತಿವಿಜೇತ ಚಲನಚಿತ್ರಗಳನ್ನು ವಿಶ್ಲೇಷಿಸುತ್ತಿರುವ ಸಂಪಾದಿತ ಕೃತಿ. ಸಂವಾದಕ್ಕಾಗಿ ಕೆಲವು ಚಲನಚಿತ್ರಗಳನ್ನು ಪ್ರದರ್ಶಿಸಿ ವಿಶ್ಲೇಷಿಸಲಾಗಿದೆ.

**೭. ಕರ್ನಾಟಕದ ರಾಜಕಾರಣ ಹಾಗೂ ಮುಖ್ಯಮಂತ್ರಿಗಳು**

ನಾಡಿನ ರಾಜಕಾರಣದ ನೆಲೆಗಳನ್ನು ಆಯಾ ಮುಖ್ಯಮಂತ್ರಿಗಳ ಕಾಲಾವಧಿಯಲ್ಲಿ ಪರಿಶೀಲಿಸಲಾಗುತ್ತಿರುವ ಯೋಜನೆ. ಚಾರಿತ್ರಿಕವಾಗಿ ಕರ್ನಾಟಕದ ರಾಜಕಾರಣವನ್ನು ವಿಮರ್ಶೆಗೆ ಒಳಪಡಿಸುವ ಆಶಯ.

**೮. ನಾಡು-ನುಡಿ ಪ್ರತೀಕಗಳು**

ನಾಡಿನ ಗುರುತಿಸುವಿಕೆಗಾಗಿ ಪ್ರತಿಪಾದಿತವಾಗುತ್ತಿರುವ ಅನೇಕ ಪ್ರತೀಕಗಳನ್ನು ಪರಿಶೀಲಿಸಲಾಗುತ್ತಿದೆ. ಅದರಲ್ಲೂ ಕನ್ನಡ, ಕನ್ನಡಿಗ, ಕರ್ನಾಟಕ ಪರಿಕಲ್ಪನೆಗಳಿಗೆ ಸಂಬಂಧಿಸಿದ ಚಾರಿತ್ರಿಕ ಅಧ್ಯಯನ.

೯. ಕರ್ನಾಟಕದ ರಾಜ್ಯಪಾಲರು ಹಾಗೂ ರಾಜಕಾರಣ

೨೦೧೫–೧೭ನೇ ಸಾಲಿನ (ದ್ವೈವಾರ್ಷಿಕ) ವೈಯಕ್ತಿಕ ಯೋಜನೆಯು ಇದಾಗಿದ್ದು, ನಾಡಿನ ರಾಜಕಾರಣದ ನೆಲೆಯಲ್ಲಿ ಕಾರ್ಯನಿರ್ವಹಿಸಿದ ರಾಜ್ಯಪಾಲರುಗಳ ಕಾರ್ಯವೈಖರಿಯನ್ನು ಚಾರಿತ್ರಿಕವಾಗಿ ವಿಶ್ಲೇಷಿಸುವ ಅಧ್ಯಯನ.

೧೫. **ಪ್ರಕಟಣೆಗಳು (ಪ್ರತಿಯೊಂದು ಕೃತಿಗೂ ೫೦ ಪದಗಳ ಸಾರಾಂಶ)**

**ವಿಶ್ವವಿದ್ಯಾಲಯದಿಂದ ಪ್ರಕಟಿತ ಕೃತಿಗಳು**

**೧. ಕನ್ನಡ–ಕರ್ನಾಟಕತ್ವ (೧೯೯೫)**

ಆಲೂರ ವೆಂಕಟರಾಯರ ಕನ್ನಡದ ಅಸ್ಮಿತೆಗಳ ಹುಡುಕಾಟದ ಬಗೆಗಿನ ಸಂಶೋಧನಾತ್ಮಕ ಕೃತಿ. ಅದರಲ್ಲೂ ನಾಡು–ನುಡಿಗಳ ಬಗೆಗೆ 'ಕನ್ನಡ–ಕರ್ನಾಟಕತ್ವ' ಎಂಬ ಪರಿಕಲ್ಪನೆಯನ್ನೇ ಟಂಕಿಸಿ, ವ್ಯಾಖ್ಯಾನಿಸಿದ ಬಗೆಯನ್ನು ವಿಶ್ಲೇಷಿಸಲಾಗಿದೆ. ಏಕೀಕರಣದ ಪ್ರಕ್ರಿಯೆಗೆ ಪೂರಕವಾಗಿ ಅವರ ಬರೆಹಗಳನ್ನು, ಪರಿಣಾಮಗಳನ್ನು ಹೇಳುವ ಮೊದಲ ಕೃತಿ.

**೨. ಕೆ.ಎಸ್.ನರಸಿಂಹಸ್ವಾಮಿ (೧೯೯೫)**

ಕನ್ನಡ ಸಾಹಿತ್ಯದ ಮೇರು ವ್ಯಕ್ತಿತ್ವಗಳನ್ನು ಅವರ ಬರೆಹದ ಮುಖೇನ ಅನುಸಂಧಾನಗೊಳ್ಳುವ ಕೃತಿಗಳಲ್ಲಿ ಕವಿ ನರಸಿಂಹಸ್ವಾಮಿ ಅವರದು ಸಹ ಒಂದು. ಕನ್ನಡ ಕಾವ್ಯದ ಧಾರೆಗಳಿಗೆ ಇವರ ಕೊಡುಗೆಯನ್ನು ಪರಿಭಾವಿಸಿದ 'ನಮ್ಮವರ ಮಾಲೆ'ಯಲ್ಲಿ ಬರೆಯಲಾದ ಕೃತಿ.

**೩. ಕನ್ನಡ ಚಳವಳಿಗಳು (೧೯೯೯)**

ಏಕೀಕರಣದ ನಂತರ ಸಾಕಾರಗೊಂಡ ಸಾಂಸ್ಕೃತಿಕ ಚಹರೆಗಳಲ್ಲಿ ಆದಂಥ ವ್ಯತ್ಯಯಗಳಲ್ಲಿ ಭಾಷಿಕ ಅಸಮಾಧಾನವೂ ಒಂದು. ಈ ಹಿನ್ನೆಲೆಯಲ್ಲಿ ನಾಡು–ನುಡಿ–ಸಂಸ್ಕೃತಿಯ ಪರಿಧಿಗಳಲ್ಲಿ ಆದ ಪ್ರತಿಭಟನೆ, ಚಳವಳಿಗಳನ್ನು ಅಂದಿನ ಹೋರಾಟಗಾರರೊಂದಿಗೆ ತೌಲನಿಕವಾಗಿ ಪರಿಶೀಲಿಸಿದ ಸಂಶೋಧನಾ ಕೃತಿ. ಅಲ್ಲದೆ ಈ ಹೊತ್ತಿಗೆ ಹೋರಾಟದ ನೆಲೆಗಳಿಗೆ ಹಿನ್ನೆಲೆಯ ಪ್ರಯತ್ನ.

**೪. ಕನ್ನಡ ಚಳವಳಿಗಾರ ಮ.ರಾಮಮೂರ್ತಿ (೧೯೯೯)**

ಕನ್ನಡದ ಅಸ್ತಿತ್ವಕ್ಕಾಗಿ ತಮ್ಮನ್ನೇ ತಾವು ಬರಿದು ಮಾಡಿಕೊಂಡು ಅಪರೂಪದ ಕನ್ನಡ ಚಳವಳಿಗಾರನನ್ನು ಕುರಿತ ಅಧ್ಯಯನ ಕೃತಿ. ಕನ್ನಡ ಬಾವುಟದ ಹರಿಕಾರರನ್ನಾಗಿ ಪರಿಶೀಲಿಸಿದ ಮೊದಲ ಕೃತಿ.

**೫. ಇತಿಹಾಸ I (೨೦೦೪)**

ಕರ್ನಾಟಕ ಸರ್ಕಾರದ ಪದವಿಪೂರ್ವ ಶಿಕ್ಷಣ ಇಲಾಖೆಯು ಹೊಸ ಪಠ್ಯಕ್ರಮವನ್ನು ರಚಿಸಿ, ಅದಕ್ಕೆ ಪೂರಕವಾಗಿ 'ಮೊದಲ ವರುಷದ ಪಿಯುಸಿ' ಪಠ್ಯಪುಸ್ತಕವನ್ನು ರೂಪಿಸಲು ಕೇಳಿಕೊಂಡಿತು. ಇದರ ಸಂಪಾದಕನಾಗಿ ಪ್ರಾಚೀನ, ಮಧ್ಯಕಾಲೀನ ಅವಧಿಗಳಿಗೆ ಸಂಬಂಧಿಸಿದಂತೆ ಪ್ರಪಂಚದ ಭಾರತ ಹಾಗೂ ಕರ್ನಾಟಕದ ಅಧ್ಯಾಯಗಳನ್ನು ಅಳವಡಿಸಿ ರಚಿಸಲು ಸಾಧ್ಯವಾಯಿತು. ಸಾಂಪ್ರದಾಯಿಕ ಕ್ರಮವನ್ನು ಹೊರತುಪಡಿಸಿ ರಚಿಸಲಾದ ಹೊಸ ಪ್ರಯೋಗ.

**೬. ಇತಿಹಾಸ II (೨೦೦೫)**

ಮೇಲಿನ ವಿವರಗಳ ಜೊತೆಗೆ ಎರಡನೆಯ ವರುಷದ ಪಿಯುಸಿಗೆ ರಚಿಸಲಾದ ಇತಿಹಾಸದ ಪಠ್ಯಪುಸ್ತಕ. ಇದರಲ್ಲಿ ಆಧುನಿಕ ಕಾಲಘಟ್ಟದ ಪ್ರಪಂಚ, ಭಾರತ ಹಾಗೂ ಕರ್ನಾಟಕದ ಅಧ್ಯಾಯಗಳನ್ನು ಅಳವಡಿಸಲಾಗಿದೆ. ಕೇಂದ್ರೀಯ ಶಾಲೆಗಳ ಪಠ್ಯಪುಸ್ತಕಗಳ ರೀತಿ (ಅಂದರೆ ಎನ್.ಸಿ.ಇ.ಆರ್.ಟಿ ಇತ್ಯಾದಿ) ಈ ಪಠ್ಯಪುಸ್ತಕವನ್ನು ಸಾಕಷ್ಟು ಹೆಚ್ಚುವರಿ ವಿಚಾರಗಳೊಂದಿಗೆ ಪ್ರಕಟಿಸಲಾಗಿದೆ. ಇವೆರಡು ಕೃತಿಗಳನ್ನು ಸರ್ಕಾರ ಮಾನ್ಯ ಮಾಡಿರುವುದು ವಿಶೇಷ.

**೭. ಕನ್ನಡಮ್ಮ (೨೦೦೫)**

ವೈಯಕ್ತಿಕ ಯೋಜನೆಯೇ ಕೃತಿಯ ರೂಪದಲ್ಲಿ ಪ್ರಕಟವಾಗಿದೆ. ಆಧುನಿಕ ಕನ್ನಡ ಕಾವ್ಯದಲ್ಲಿನ ನಾಡು–ನುಡಿ ರೂಪಕ–ಪ್ರತೀಕಗಳನ್ನು ಕುರಿತ ಅಧ್ಯಯನ ಕೃತಿ. ಅದರಲ್ಲೂ ಹೆಣ್ಣು ಸಂಕಥನದ ಅಂದರೆ ಭಾರತ–ಕರ್ನಾಟಕಗಳನ್ನು ತಾಯಿ–ಮಗಳ ಸಂಬಂಧದೊಂದಿಗೆ ಬೆಸೆಯಲಾದ ಕಾವ್ಯದ ಪರಿಶೀಲನೆ.

**೮. 'ಮೂವ್‌ಮೆಂಟ್ ಫಾರ್ ಯುನೈಟೆಡ್ ಕರ್ನಾಟಕ' (೨೦೦೯)**
ಇದು ಇಂಗ್ಲಿಶ್‌ನಲ್ಲಿರುವ ಸಂಶೋಧನ ಕೃತಿ. ನಾಡು ಏಕೀಕೃತವಾದ ಚಾರಿತ್ರಿಕ ಘಟನೆಗೆ ಕಾರಣವಾದ ಅಂಶಗಳು ಹಾಗೂ ಪ್ರಕ್ರಿಯೆಯನ್ನು ದಾಖಲಿಸಿ, ವಿಶ್ಲೇಷಿಸಿರುವ ಮೊದಲ ಅಧ್ಯಯನ ಕೃತಿ. ಅನೇಕ ಸಾಂಸ್ಕೃತಿಕ ಆಯಾಮಗಳೊಂದಿಗೆ ಪರಿಶೀಲಿಸಲಾದ ಹೊಸ ಪ್ರಯೋಗ. ಇದೊಂದು ಅಂತರ್‌ಶಿಸ್ತೀಯ ಅಧ್ಯಯನವೂ ಹೌದು.

**೯. ನವಚಾರಿತ್ರಿಕವಾದ (೨೦೦೯)**
ವೈಯಕ್ತಿಕ ಯೋಜನೆಯೇ ಕೃತಿಯ ರೂಪದಲ್ಲಿ ಪ್ರಕಟವಾಗಿದೆ. ಇಲ್ಲಿಯವರೆಗೂ ಇದ್ದಂಥ ಸಾಂಪ್ರದಾಯಿಕ ಅಧ್ಯಯನದ ನೆಲೆಗಳಿಗೆ ಪರ್ಯಾಯವಾಗಿ ಹೊಸನೋಟವೊಂದನ್ನೇ ಹುಟ್ಟುಹಾಕಲಾಯಿತು. ಅದೇ 'ನವಚಾರಿತ್ರಕವಾದ'. ಈ ಪರಿಕಲ್ಪನೆಯ ಪ್ರಯೋಗಗಳು ಸಾಹಿತ್ಯ, ಚರಿತ್ರೆ ಅಥವಾ ಇನ್ನಾವುದೇ ಸಾಂಸ್ಕೃತಿಕ ಅಧ್ಯಯನದ ಒಳನೋಟಗಳಿಗೆ ಹೇಗೆ ಪೂಕರವಾಗಿವೆ ಎಂದು ಚಿಂತಿಸಲಾದ ಕೃತಿ. ಬಹುಶಃ ಕನ್ನಡದಲ್ಲಿ ಮೊದಲ ಪ್ರಯತ್ನ.

**೧೦. ಚರಿತ್ರೆ ಅಧ್ಯಯನ ಸಂ–೨, ಸಂಚಿಕೆ–೧ (೨೦೦೬)**
ವಿಭಾಗದ ವತಿಯಿಂದ ಹೊರತರಲಾಗುತ್ತಿರುವ ಚರಿತ್ರೆಯ ನಿಯತಕಾಲಿಕ. ಇದರ ಸಂಪಾದಕನಾಗಿ ಮೊದಲ ಸಂಚಿಕೆಯಲ್ಲಿ ಹೊಸ ಒಳನೋಟಗಳಿಂದ ಕೂಡಿದ, ಶೋಷಿತ ನೆಲೆಗಳಿಗೆ ಸಂಬಂಧಿಸಿದ ಲೇಖನಗಳನ್ನು ಸಂಗ್ರಹಿಸಲಾಗಿದೆ. ಅದರಲ್ಲೂ ವಸಾಹತುಶಾಹಿ, ಮಹಿಳೆ ಹಾಗೂ ಬುಡಕಟ್ಟು ನೆಲೆಗಳನ್ನು ಪರಿಶೋಧಿಸಲಾದ ಲೇಖನಗಳ ಸಂಕಲನ.

**೧೧. ಚರಿತ್ರೆ ಅಧ್ಯಯನ ಸಂಪುಟ–೨, ಸಂಚಿಕೆ–೨ (೨೦೦೭)**
ಸಮಕಾಲೀನ ಚರಿತ್ರೆಯ ಅಧ್ಯಯನದ ಆಯಾಮಗಳನ್ನು ಪರಿಶೀಲನೆಗೆ ಈಡುಮಾಡಿದ ಹೊಸ ಚಿಂತನೆಗಳ ಲೇಖನಗಳ ಸಂಪಾದನೆ. ದಲಿತ, ಮಹಿಳಾ ನೆಲೆಗಳ ಜೊತೆಗೆ ಚರಿತ್ರೆ ಲೇಖನಶಾಸ್ತ್ರ, ವೈಧಾನಿಕತೆ ಹಾಗೂ ಚಿಂತನಾ ಧಾರೆಗಳನ್ನು ಮರುಪರಿಶೀಲಿಸಲಾದ ಲೇಖನಗಳಿವೆ. ಅದರಲ್ಲೂ ಚರಿತ್ರೆ ಹಾಗೂ ಕೋಮುವಾದಿ ದೃಷ್ಟಿಕೋನಗಳನ್ನು ವಿಶ್ಲೇಷಿಸುವ ಹಾಗೂ ಶಾಲಾ–ಕಾಲೇಜುಗಳಿಗೆ ಮಾನ್ಯ ಮಾಡಲಾದ ಪಠ್ಯಪುಸ್ತಕಗಳನ್ನು ಕುರಿತು ಸಂಗ್ರಹಿಸಲಾದ ಲೇಖನಗಳನ್ನು ಅಳವಡಿಸಿರುವುದು ಇಲ್ಲಿನ ವಿಶೇಷತೆ.

**ವೈಯಕ್ತಿಕ ಪ್ರಕಟಿತ ಕೃತಿಗಳು**

**೧. ಕರ್ನಾಟಕದ ಏಕೀಕರಣ ಮತ್ತು ಕನ್ನಡ ಸಾಹಿತ್ಯ ಪರಿಷತ್ತು (೧೯೯೫)**
ನಾಡಿನ ಏಕೀಕರಣಕ್ಕೆ ಚಳವಳಿ ಹಾಗೂ ಹೋರಾಟದ ಸ್ವರೂಪ ಬರಲು ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಮ್ಮೇಳನಗಳು ಹಾಗೂ ಅಲ್ಲಿನ ನಿರ್ಣಯಗಳು ಹೇಗೆ ಪೂರಕವಾದವು ಎಂಬುದನ್ನು ಪರಿಶೀಲಿಸಲಾದ ಮೊದಲ ಅಧ್ಯಯನದ ಕೃತಿ. ಕನ್ನಡಿಗರ ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಒಂದಾದ 'ಕನ್ನಡ ಸಾಹಿತ್ಯ ಪರಿಷತ್ತು' ನಡೆದುಬಂದ ಚರಿತ್ರೆಯನ್ನು ವಿಶ್ಲೇಷಿಸುವ ಪ್ರಯೋಗ ಇಲ್ಲಿದೆ. ಇದು ಪರಿಷತ್ತಿನ ಪ್ರಕಟಣೆ.

**೨. ಕರ್ನಾಟಕದ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ (೧೯೯೮, ೨೦೦೦, ೨೦೦೬)**
ಪಿಎಚ್.ಡಿ ಅಧ್ಯಯನದ ವಸ್ತುವಿಷಯವನ್ನೇ ಖಾಸಗಿ ಹಾಗೂ ಸರ್ಕಾರಿ ಸಂಘ–ಸಂಸ್ಥೆಗಳು ಮೂರು ಮುದ್ರಣಗಳಲ್ಲಿ ಪ್ರಕಟಿಸಿದ ಅಧ್ಯಯನ ಕೃತಿ. ಕನ್ನಡ ಸಾಹಿತ್ಯದ ಕಾವ್ಯ, ಕಾದಂಬರಿ, ಕತೆ ಹಾಗೂ ನಾಟಕ ಪ್ರಕಾರಗಳು ಹೇಗೆ ನಾಡು ಒಂದುಗೂಡಲು ಪೂರಕವಾಗಿ ಸ್ಪಂದಿಸಿವೆ ಎಂಬುದನ್ನು ಸಾಂಸ್ಕೃತಿಕ ಒಳನೋಟಗಳೊಂದಿಗೆ ವಿಶ್ಲೇಷಿಸಲಾದ ಸಂಶೋಧನ ಕೃತಿ. ಅಲ್ಲದೆ ಇದೊಂದು ಸಾಹಿತ್ಯ ಹಾಗೂ ಚರಿತ್ರೆಯನ್ನು ಒಳಗೊಂಡ ಅಂತರ್‌ಶಿಸ್ತೀಯ ಅಧ್ಯಯನದ ಪ್ರಯೋಗ ಎಂಬುದು ಗಮನಾರ್ಹ. ಅಲ್ಲದೆ 'ಸುವರ್ಣ ಕರ್ನಾಟಕ' ಆಚರಣೆಯ ಸಂದರ್ಭದಲ್ಲಿ ಕರ್ನಾಟಕ ಸರ್ಕಾರ ಪ್ರಕಟಿಸಿ ಮಾನ್ಯತೆ ನೀಡಿದ್ದು ವಿಶೇಷ.

**೩. ಗೋಕಾಕ್ ವರದಿ (೨೦೦೬)**
ಕನ್ನಡ ಭಾಷೆಯ ಸ್ಥಾನ–ಮಾನಗಳಿಗೆ ಸಂಬಂಧಿಸಿದಂತೆ ಡಾ.ಗೋಕಾಕ್ ಅವರ ನೇತೃತ್ವದಲ್ಲಿ ರಚಿಸಲಾದ ಸಮಿತಿ ಹಾಗೂ ಅದು ನೀಡಿದ ವರದಿಯ ಹಿನ್ನೆಲೆಯಲ್ಲಿ ಉಂಟಾದ ಚಳವಳಿಯನ್ನು ಅಧ್ಯಯನಕ್ಕೆ ಒಳಗು ಮಾಡಿದ ಸಂಶೋಧನಾ ಕೃತಿ. ಅನೇಕ ಒಳ ನೋಟಗಳು ಹಾಗೂ ಹುನ್ನಾರಗಳನ್ನು ಮೊದಲ ಭಾರಿಗೆ ವಿಶ್ಲೇಷಿಸಿದ ಕೃತಿ ಎಂಬುದು ಇಲ್ಲಿನ ವಿಶೇಷತೆ. ಇದು ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣೆ.

**೪. ಕರ್ನಾಟಕ ಏಕೀಕರಣ ಮತ್ತು ನಾಮಕರಣ (೨೦೦೫)**
ಕರ್ನಾಟಕ ಸರ್ಕಾರವೇ ಪ್ರಕಟಿಸಿದ ಕೃತಿ. ನಾಡು ಏಕೀಕರಣಗೊಂಡ ಬಗೆ ಹಾಗೂ 'ಕರ್ನಾಟಕ' ಎಂದು ಹೆಸರು ಪಡೆದ ಬಗೆಯು ಯಾವ ರೀತಿಯ ಚರಿತ್ರೆಯನ್ನು ಹೊಂದಿದೆ ಎಂಬುದನ್ನು ಅಧ್ಯಯನ ಮಾಡಿದ ಕೃತಿ. 'ಮೈಸೂರು

ರಾಜ್ಯ'ವು 'ಕರ್ನಾಟಕ'ವಾದುದರ ಹಿಂದಿನ ಕುತೂಹಲಕರ ಅಂಶಗಳನ್ನು ಮೊದಲ ಬಾರಿಗೆ ವಿಶ್ಲೇಷಿಸಿದ ಅಧ್ಯಯನ ಕೃತಿ.

**೫. ಹಂಪಿ ವಿಜಯನಗರ (೨೦೦೫)**
'ಹಂಪಿ ಉತ್ಸವ'ದ ನೆನಪಿಗಾಗಿ ಹೈಸ್ಕೂಲು ವಿದ್ಯಾರ್ಥಿಗಳಿಗೆ ನಾಡಿನ ಚರಿತ್ರೆಯನ್ನು ಅದರಲ್ಲೂ ಹಂಪಿ–ವಿಜಯನಗರದ ಸಾಂಸ್ಕೃತಿಕ ಹಿರಿಮೆಯನ್ನು ಮನನ ಮಾಡಿಕೊಡಲು ರಚಿಸಿದ ಕೃತಿ. ಬಳ್ಳಾರಿಯ ಜಿಲ್ಲಾಡಳಿತವು ಸುಮಾರು ಐವತ್ತು ಸಾವಿರ ವಿದ್ಯಾರ್ಥಿಗಳಿಗೆ ಈ ಕೃತಿಯನ್ನು ಹಂಚುವುದರ ಮುಖೇನ ಕ್ವಿಜ್ ಸ್ಪರ್ಧೆಯನ್ನು ನಡೆಸಿದ್ದು ಗಮನಾರ್ಹ ಸಂಗತಿ. ಅಲ್ಲದೆ ಹೆಚ್ಚು ಅಂಕಗಳನ್ನು ಪಡೆದವರನ್ನು ಸನ್ಮಾನಿಸಿದ್ದು ವಿಶೇಷವಾದುದು.

**೬. ಮ.ರಾಮಮೂರ್ತಿ (೨೦೧೨)**
ಕನ್ನಡ ಸೇನಾನಿ ಎಂದೇ ಗುರುತಿಸಲಾದ ಕನ್ನಡ ಚಳವಳಿಗಾರ ಮ.ರಾಮಮೂರ್ತಿ ಅವರನ್ನು ಕುರಿತ ಯೋಜನೆ. ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡವನ್ನು ಕಟ್ಟಿದವರು' ಮಾಲೆಯಡಿಯಲ್ಲಿ ಪ್ರಕಟಿಸಿದೆ.

**ಸಂಪಾದಿತ ಕೃತಿಗಳು (ಖಾಸಗಿ ಪ್ರಕಟಣೆ)**
**೧. ತೆಂಬರೆಯ ತರಂಗ**
ಹಿರಿಯ ಸಾಹಿತಿ, ನಾಡೋಜ ಡಾ.ಚಂದ್ರಶೇಖರ ಕಂಬಾರ ಅವರೊಂದಿಗೆ ಸಂಪಾದನೆ ಮಾಡಲಾದ ಕೃತಿ. ಇದು ನಾಡಿನ ಪ್ರತಿಭಾನ್ವಿತ ಮುಖ್ಯಮಂತ್ರಿಗಳೂ, ಸಾಹಿತಿಗಳೂ ಆದ ಎಂ.ವೀರಪ್ಪ ಮೊಯಿಲಿ ಅವರಿಗೆ ಸಲ್ಲಿಸಿದ ವಿಮರ್ಶಾ ಲೇಖನಗಳ ಸಂಗ್ರಹ. ಮೊಯಿಲಿ ಅವರೇ ಖುದ್ದಾಗಿ ರಚಿಸಿ ಕನ್ನಡ ಸಾರಸ್ವತ ಲೋಕದಲ್ಲಿ ಚರ್ಚೆಗೆ ಎಡೆಮಾಡಿಕೊಟ್ಟ ಕೃತಿಗಳು ಹಾಗೂ ಲೇಖನಗಳನ್ನು ಒಂದೆಡೆ ವಿಮರ್ಶೆಗೆ ಒಳಗು ಮಾಡಿದ ಈ ಕೃತಿ ಅನೇಕ ಒಳನೋಟಗಳನ್ನೂ ನೀಡಿದೆ. ಕನ್ನಡ ವಿಶ್ವವಿದ್ಯಾಲಯದ ಹಾಗೂ ನಾಡಿನ ಖ್ಯಾತ ವಿದ್ವಾಂಸರು ಮೊಯಿಲಿ ಅವರ ಬರೆಹಗಳಿಗೆ ಸ್ಪಂದಿಸಿದ ಬಗೆಯನ್ನು ಮೊದಲ ಬಾರಿಗೆ ಈ ಕೃತಿಯಲ್ಲಿ ಸಂಕಲಿಸಿಕೊಡಲಾಗಿದೆ.

೧೬. **ಪ್ರಕಟಿತ ಪ್ರಮುಖ ೧೦ ಲೇಖನಗಳು**

**೧. 'ಕರ್ನಾಟಕ ಸಂಸ್ಕೃತಿ: ಗ್ರಹಿಕೆಯಲ್ಲಿನ ತೊಡಕುಗಳು' (ಸಂಕ್ರಮಣ – ಧಾರವಾಡ, ಡಿಸೆಂಬರ್ ೧೯೯೭)**
ಸಂಸ್ಕೃತಿ ಎಂದಾಕ್ಷಣ ಏಕಮುಖಿ ನೆಲೆಗಳು ಜಾಗೃತವಾಗುವ ಈ ಹೊತ್ತಿನಲ್ಲಿ ಅರ್ಥ ವ್ಯಾಖ್ಯಾನಗಳೊಂದಿಗೆ ಅದರ ಬಹುಮುಖಿ ಚಹರೆಗಳನ್ನು ದಾಖಲಿಸಿ ವಿಶ್ಲೇಷಿಸಿದ ಲೇಖನ. ಕರ್ನಾಟಕ ಸಂಸ್ಕೃತಿಯಲ್ಲಿ ಹೆಮ್ಮೆಯ ಸಂಗತಿಗಳ ಜೊತೆಗೆ ಅವಮಾನದ ಸಂಗತಿಗಳೂ ಇವೆ ಎಂಬುದನ್ನು ವಿಶ್ಲೇಷಿಸಿ ಗ್ರಹಿಕೆಯ ತೊಡಕುಗಳ ಕುರಿತು ಚಿಂತಿಸಿದ ಲೇಖನ.
**೨. 'ಸಾಹಿತ್ಯ ಮತ್ತು ಚರಿತ್ರೆ' (ಶೂದ್ರ–ಬೆಂಗಳೂರು ಸಂಪುಟ ೧, ಸಂಚಿಕ ೨, ೧೯೯೬)**
ಸಾಹಿತ್ಯ ಹಾಗೂ ಚರಿತ್ರೆ ಜ್ಞಾನಶಿಸ್ತುಗಳ ಅವಿನಾಭಾವ ಸಂಬಂಧಗಳನ್ನು ವಿಶ್ಲೇಷಿಸುವ ಲೇಖನ. ಅಂತರ್‌ಶಿಸ್ತೀಯ ಅಧ್ಯಯನದ ನೆಲೆಗಳಲ್ಲಿ ಈ ಎರಡೂ ಜ್ಞಾನಶಾಖೆಗಳನ್ನು ಬಳಸಿಕೊಂಡು ಒಳನೋಟಗಳನ್ನು ಪಡೆಯಲು ಸಾಧ್ಯ ಎಂಬ ದಿಸೆಯಲ್ಲಿ ಚಿಂತನೆ ಮಾಡಿದ ಲೇಖನ.

**೩. 'ಆಲೂರ ವೆಂಕಟರಾಯರ 'ಕರ್ನಾಟಕತ್ವ'ದ ಪರಿಕಲ್ಪನೆ' (ಸಾಧನೆ–ಬೆಂಗಳೂರು ವಿಶ್ವವಿದ್ಯಾಲಯ ನಿಯತಕಾಲಿಕೆ, ಡಿಸೆಂಬರ್–೨೦೦೨)**
ನಾಡಿನ ಏಕೀಕರಣವಷ್ಟೇ ಅಲ್ಲದೆ ಎಲ್ಲ ಬಗೆಯ ಅಭಿವೃದ್ಧಿಗಳನ್ನು ಕರ್ನಾಟಕತ್ವದ ಪರಿಕಲ್ಪನೆಯ ಮೂಲಕವೇ ಸಂವಾದ ನಡೆಸಿದವರು ಆಲೂರ ವೆಂಕಟರಾವ್. ಅವರ ಈ ಪರಿಕಲ್ಪನೆಯ ವಿಭಿನ್ನ ನೋಟಗಳನ್ನು ವಿಶ್ಲೇಷಿಸುವ ಲೇಖನ.

**೪. 'ಜೆಂಡರ್ ಅಂಡ್ ನ್ಯಾಷನಲಿಸ್ಟ್ ಡಿಸ್ಕೋರ್ಸ್: ಮಾಡರ್ನ್ ಕನ್ನಡ ಪೊಯೆಟ್ರಿ ಅಂಡ್ ಇಂಪ್ಯಾಕ್ಟ್ ಆಫ್ ಬಂಕಿಮಚಂದ್ರ' (೬೪ನೆಯ 'ಇಂಡಿಯನ್ ಹಿಸ್ಟರಿ ಕಾಂಗ್ರೆಸಿ'ನಲ್ಲಿ (ಮೈಸೂರು ೨೦೦೩) ಮಂಡಿಸಿದ ಪ್ರಬಂಧ, ಕನ್ನಡದಲ್ಲಿಯೂ ಪ್ರಕಟವಾಗಿದೆ.)**
ಬಂಗಾಳಿ ಕವಿ ಬಂಕಿಮ ಚಂದ್ರ ಚಟರ್ಜಿ ಅವರ ಪ್ರಭಾವದಿಂದ ಕನ್ನಡ ಕಾವ್ಯದಲ್ಲಾದ ಸ್ಥಿತ್ಯಂತರಗಳನ್ನು ಹೆಣ್ಣು ಹಾಗೂ ರಾಷ್ಟ್ರೀಯ ಸಂಕಥನದ ನೆಲೆಗಳಲ್ಲಿ ಪರಿಶೀಲಿಸಿದ ಸಂಶೋಧನ ಪ್ರಬಂಧ.

**೫. 'ಹಿಸ್ಟಾರಿಕಲ್ ಎಮರ್ಜೆನ್ಸ್ ಆಫ್ ಕನ್ನಡ ಸ್ಪಿರಿಟ್' (೬೫ನೆಯ 'ಸೌತ್ ಇಂಡಿಯನ್ ಹಿಸ್ಟರಿ ಕಾಂಗ್ರೆಸ್' (ಮಧುರೈ, ೨೦೦೫) ಮಹಾಅಧಿವೇಶನದಲ್ಲಿ ಮಂಡಿಸಿದ ಪ್ರಬಂಧ, ೨೬ನೆಯ ಅಧಿವೇಶನ (ಬೆಂಗಳೂರು) ಸಂಸ್ಕರಣ ಸಂಚಿಕೆಯಲ್ಲಿ ಪ್ರಕಟವಾದ ಲೇಖನ)**

ಕನ್ನಡಿಗರು ತಮ್ಮ ಭಾಷೆ, ಸಂಸ್ಕೃತಿಗಳನ್ನು ವಸಾಹತುಶಾಹಿ ಕಾಲಘಟ್ಟದಲ್ಲಿ, ಅಸ್ಮಿತೆಯ ಹುಡುಕಾಟದ ನೆಲೆಗಳಲ್ಲಿ ಕಂಡುಕೊಂಡ ಆಯಾಮಗಳನ್ನು ಚಾರಿತ್ರಿಕವಾಗಿ ಪರಿಶೀಲಿಸಿದ ಪ್ರಬಂಧ. ಕನ್ನಡ–ಕನ್ನಡಿಗ–ಕರ್ನಾಟಕ ಮೊದಲಾದ ಪರಿಕಲ್ಪನೆಗಳು ಹೇಗೆ ಜಾಗೃತಿ ಪಡೆದವು ಎಂಬುದನ್ನು ಮೊದಲ ಬಾರಿಗೆ ದಾಖಲಿಸಿದ ಸಂಪ್ರಬಂಧ.

**೬. 'ಎಡ್ವರ್ಡ್ ಸೈದ್ ಚಿಂತನೆಗಳ ವಿಶ್ಲೇಷಣೆ' (ಚರಿತ್ರೆ ಅಧ್ಯಯನ–ಹಂಪಿ ಸಂಪುಟ–೧, ಸಂಚಿಕೆ–೧೨, ೨೦೦೬)**
ವಸಾಹತೋತ್ತರ ಚಿಂತಕರಲ್ಲಿ ಒಬ್ಬರಾದ ಎಡ್ವರ್ಡ್ ಸೈದ್ ಅವರ ಪರಿಕಲ್ಪನೆಗಳು ಹಾಗೂ ಕೃತಿಗಳನ್ನು ಪರಿಶೀಲಿಸಿದ ಪ್ರಬಂಧ. ಸೈದ್ ಅವರ ಲೇಖನಗಳು ಚಿಂತನಶೀಲವಾದ ಒಳನೋಟಗಳನ್ನು ಹೊಂದಿದ್ದು ಸಮಕಾಲೀನ ಸಂದರ್ಭದಲ್ಲಿ ಎಷ್ಟರಮಟ್ಟಿಗೆ ಪ್ರಸ್ತುತಗೊಳ್ಳುತ್ತವೆ ಎಂಬುದರ ಕಡೆಗೆ ಗಮನಹರಿಸಲಾದ ಲೇಖನ.

**೭. 'ಟಿಪ್ಪು ಮತ್ತು ಕನ್ನಡ ಭಾಷೆ' ('ಅಗ್ನಿ' ವಾರಪತ್ರಿಕೆ, ಬೆಂಗಳೂರು ನವೆಂಬರ್–೨೦೦೬)**
ಟಿಪ್ಪುವಿನ ಕನ್ನಡದ ಪ್ರೀತಿಯನ್ನು ಕುರಿತು ಎದ್ದಂಥ ವಿವಾದದ ಹಿನ್ನೆಲೆಯಲ್ಲಿ ಬರೆಯಲಾದ ಲೇಖನ ಕನ್ನಡ ಭಾಷೆಯ ಬಳಕೆಯ ವಿಚಾರದಲ್ಲಿನ ಕೆಲವು ಒಳನೋಟಗಳನ್ನು ನೀಡುವ ಲೇಖನ.

**೮. 'ಲಾವಣಿಗಳಲ್ಲಿ ಟಿಪ್ಪು' ('ಚರಿತ್ರೆ ಅಧ್ಯಯನ'_ಹಂಪಿ ಸಂಪುಟ–೧, ಸಂಚಿಕೆ–೨, ೨೦೦೭)**
ಕನ್ನಡಿಗರ ಜನಮಾನಸದಲ್ಲಿ ಅದರಲ್ಲೂ ತೋಂಡಿ ರೂಪದ ಲಾವಣಿಗಳಲ್ಲಿ ಟಿಪ್ಪು ಹೇಗೆ ಪ್ರತಿಪಾದಿತನಾಗಿದ್ದಾನೆ ಎಂಬುದನ್ನು ವಿಶ್ಲೇಷಿಸುವ ಸಂಪ್ರಬಂಧ.

**೯. 'ಕರ್ನಾಟಕದ ರಾಜಕಾರಣ ಹಾಗೂ ಮುಖ್ಯಮಂತ್ರಿಗಳು' ('ಪ್ರಗತಿಪಥ'–ಸುವರ್ಣಕರ್ನಾಟಕ ಸಂಪುಟ, ಕರ್ನಾಟಕ ಸರ್ಕಾರ, ಬೆಂಗಳೂರು–೨೦೦೭)**
ನಾಡಿನ ಎಲ್ಲ ಮುಖ್ಯಮಂತ್ರಿಗಳನ್ನು ಅವರ ವ್ಯಕ್ತಿತ್ವ ಹಾಗೂ ರಾಜಕಾರಣದ ನೆಲೆಗಳಲ್ಲಿ ವಿಶ್ಲೇಷಿಸಲಾದ ಲೇಖನ. ನಾಡಿನ ಅಭಿವೃದ್ಧಿ ಹಾಗೂ ಅನಭಿವೃದ್ಧಿಯ ವಿಚಾರಗಳಲ್ಲಿ ಪರಿಶೀಲಿಸಲಾದ ವಿಮರ್ಶಾತ್ಮಕ ವಿಶ್ಲೇಷಣೆಯ ಮೊಟ್ಟ ಮೊದಲ ಪ್ರಯತ್ನ.

**೧೦. 'ಗತ'ದ 'ಭೂತ' ('ಚರಿತ್ರೆ ಅಧ್ಯಯನ'–ಹಂಪಿ, ಸಂಪುಟ–೩, ಸಂಚಿಕೆ–೧೬, ೨೦೦೮)**
ಚರಿತ್ರಕಾರರು 'ಚರಿತ್ರೆ' ಕೇವಲ 'ಗತ' ಕಾಲದ 'ಭೂತ'ವೆಂದೇ ಪರಿಭಾವಿಸಿ ಈ ಹೊತ್ತಿಗೂ ವಿಶ್ಲೇಷಿಸುತ್ತಿರುವ ಪರಿಯನ್ನು ಕುರಿತು ಪರಿಶೀಲಿಸುವ ನವಚಾರಿತ್ರಿಕವಾದದ ಹಿನ್ನಲೆಯ ಲೇಖನ.

**೧೧. 'ಕನ್ನಡ ಸಂಸ್ಕೃತಿ ಚಳವಳಿಗಳು' ('ಕನ್ನಡ ನುಡಿಕೋಶ'–ಮೈಸೂರು ವಿಶ್ವವಿದ್ಯಾನಿಲಯ, ೨೦೦೯)**
ಸಮಕಾಲೀನ ಸಂದರ್ಭದಲ್ಲಿನ ಭಾಷೆ, ನೆಲ, ಜಲ, ಸಂಸ್ಕೃತಿ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಎದುರಾಗುವ ಆಘಾತಗಳನ್ನು ಹಾಗೂ ಇದಕ್ಕೆ ಪ್ರತಿರೋಧವಾಗಿ ಹುಟ್ಟಿಕೊಂಡ ಕನ್ನಡ ಚಳವಳಿಗಳ ಸ್ವರೂಪವನ್ನು ವಿಶ್ಲೇಷಿಸುವ ಪ್ರಬಂಧ.

**೧೨. 'ಸುವರ್ಣ ಕರ್ನಾಟಕದ ಸಮಸ್ಯೆ ಸವಾಲುಗಳು ಹಾಗೂ ಹೆಮ್ಮೆ' ('ಚಾರಿತ್ರಿಕ ಕರ್ನಾಟಕ' ಸಂಪುಟ–೨, ಸುವರ್ಣ ಕರ್ನಾಟಕದ ಯೋಜನೆ, ಕರ್ನಾಟಕ ಸರ್ಕಾರ, ಬೆಂಗಳೂರು–೨೦೧೦)**
ಏಕೀಕರಣದ ಅನಂತರ ನಾಡು ಕಂಡ ವಿಭಿನ್ನ ಅವಸ್ಥಾಂತರಗಳನ್ನು ಚಾರಿತ್ರಿಕವಾಗಿ ವಿಶ್ಲೇಷಿಸಿದ ಲೇಖನ. ನಿಗದಿತ ಗುರಿ, ಸಾಧನೆಗಳೊಂದಿಗೆ ಹೆಮ್ಮೆಪಟ್ಟುಕೊಳ್ಳುವ ಹಾಗೂ ಬಗೆಹರಿಯದ ಸಮಸ್ಯೆಗಳ ಕಡೆಗೆ ಗಮನಸೆಳೆಯುವ ಮೊದಲ ಪ್ರಯತ್ನ.

**೧೩. 'ಹೆಣ್ಣು ಸಂಕಥನ' (ಚರಿತ್ರೆ ಅಧ್ಯಯನ ಸಂ–೬, ೨೦೧೨, ಸಂಯುಕ್ತ ಸಂಚಿಕೆ)**
ನಾಡನ್ನು ಹೆಣ್ಣು ಸಂಕಂಥನವಾಗಿ ಪರಿಭಾವಿಸಿದ ಲೇಖಕರನ್ನು ಹಾಗೂ ಕಾವ್ಯವನ್ನು ವಿಶ್ಲೇಷಿಸುವ ಸಂಶೋಧನ ಪ್ರಬಂಧ.

**೧೪. 'ಕನ್ನಡ ಭಾಷಾ ಚಳವಳಿಗಳು' (ಆಳ್ವಾಸ್ ನುಡಿಸಿರಿ ೨೦೧೨ರಲ್ಲಿ ಮಂಡಿಸಿದ ಪ್ರಬಂಧ, ೨೦೧೩ರಲ್ಲಿ ಪ್ರಕಟ)**
ಕನ್ನಡ ಭಾಷಾ ಚಳವಳಿಗಳನ್ನು ಚಾರಿತ್ರಿಕವಾಗಿ ವಿಶ್ಲೇಷಣೆಗೆ ಒಳಪಡಿಸಿದ ಸಂಪ್ರಬಂಧ. ಏಕೀಕರಣೋತ್ತರ ಕರ್ನಾಟಕದ ಕನ್ನಡ ಭಾಷಿಕ ನೆಲೆಗಳನ್ನು ತಾತ್ವಿಕವಾಗಿ ಗ್ರಹಿಸಲು ಅನುಕೂಲಕರ.

**೧೫. 'ಕನ್ನಡ ಚಳವಳಿಯ ಮೊದಲ ಹರಿಕಾರ ಕೋಣಂದೂರು ಲಿಂಗಪ್ಪ: ಕೋ.ಲಿಂ ಎಂಬ ಕೌತುಕ' (ಕೋಣಂದೂರು ಲಿಂಗಪ್ಪ ಅವರ ಅಭಿನಂದನಾ ಗ್ರಂಥಕ್ಕಾಗಿ ಬರೆದ ಪ್ರಬಂಧ)**
ಕನ್ನಡ ಚಳವಳಿಯ ಮೊದಲ ಹಾಗೂ ಎರಡನೆಯ ಹಂತಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಸಮಾಜವಾದಿ ಧುರೀಣ ಕೋಣಂದೂರು ಲಿಂಗಪ್ಪ ಅವರನ್ನು ಕುರಿತ ಲೇಖನ.

**೧೬. 'ವಾಸ್ತವವಾದ ಹಾಗೂ ಸೃಜನಶೀಲತೆ' (ಚರಿತ್ರೆ ಅಧ್ಯಯನ ಸಂ-೮, ಸಂಚಿಕೆ-೨, ೨೦೧೩)**
ವಾಸ್ತವವಾದದ ಹಿನ್ನೆಲೆಯಲ್ಲಿ ಕನ್ನಡ ಕಾದಂಬರಿಗಳಲ್ಲಿ ವಾಸ್ತವಿಕತೆಯನ್ನು ಗುರುತಿಸುವ ಕಿರುಪ್ರಯತ್ನ.

**೧೭. 'ಭೌತವಿಜ್ಞಾನ, ಸಮಾಜ ಹಾಗೂ ಚರಿತ್ರೆ' (ಸಮಾಜ ಅಧ್ಯಯನ ಸಂ-೧, ಸಂಚಿಕೆ-೧, ೨೦೧೪)**
ಭೌತವಿಜ್ಞಾನ, ಸಮಾಜವಿಜ್ಞಾನ ಹಾಗೂ ಚರಿತ್ರೆಯ ಸಂಬಂಧಗಳನ್ನು ಕುರಿತ ಹೊಸ ಆಲೋಚನೆಗಳ ವಿಶ್ಲೇಷಣೆ.

**೧೮. 'ಮೌಖಿಕ ಚರಿತ್ರೆ' (ಸಮಾಜ ಅಧ್ಯಯನ ಸಂ-೧, ಸಂಚಿಕೆ-೨, ೨೦೧೫)**
ತೋಂಡಿ ಪರಂಪರೆಯಲ್ಲಿನ ಆಕರಗಳನ್ನು ಚರಿತ್ರೆಯ ಕಟ್ಟುವಿಕೆಯಲ್ಲಿ ಬಳಸಿಕೊಳ್ಳಲಾಗುತ್ತಿರುವ ಕ್ರಮಗಳನ್ನು ಕುರಿತ ವಿಶ್ಲೇಷಣೆ.

## ೧೭. ಪಿಎಚ್.ಡಿ ಮಾರ್ಗದರ್ಶನ

**ಅಭ್ಯರ್ಥಿಗಳ ಹೆಸರು । ಪಿಎಚ್.ಡಿ ಮಹಾಪ್ರಬಂಧದ ಶೀರ್ಷಿಕೆ (ಪದವಿ ಘೋಷಿಸಿದ ದಿನಾಂಕ)**

**೧. ಟಿ.ಕೆ. ವಾಣಿಶ್ರೀ । ಕರ್ನಾಟಕದ ಚರಿತ್ರೆ ಮತ್ತು ಸ್ತ್ರೀವಾದಿ ನೆಲೆಗಳು (೨೦೦೩)**
'ಚರಿತ್ರೆ' ಎಂದಾಕ್ಷಣ ಪುರುಷಕೇಂದ್ರಿತ ಅನ್ನುವ ದಿಸೆಯಲ್ಲಿ ಇಲ್ಲಿಯವರೆಗೂ ದಾಖಲಿಸಿ, ವಿಶ್ಲೇಷಿಸಿರುವ ಅಧ್ಯಯನಗಳೇ ಹೆಚ್ಚು. ಇದರಲ್ಲಿ ಹೆಣ್ಣಿನ ಪಾಲು ಸಮಾನವಾದುದು ಎಂಬ ದೃಷ್ಟಿಯಲ್ಲಿ ಸ್ತ್ರೀವಾದಿ ಅಧ್ಯಯನದ ನೆಲೆಗಳಿಂದ ಪ್ರವೇಶ ಮಾಡಿದ ಸಂಶೋಧನ ಪ್ರಬಂಧ. ಅದರಲ್ಲೂ ಕರ್ನಾಟಕದ ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ ಸಂದರ್ಭಗಳ ಚರಿತ್ರೆಯನ್ನು ಸ್ತ್ರೀವಾದಿ ನೆಲೆಗಳಿಂದ ಪ್ರವೇಶಿಸಲು ಸಾಧ್ಯವಿದೆ ಎಂಬುದನ್ನು ಮೊದಲ ಬಾರಿಗೆ ಸಾಬೀತುಪಡಿಸಿದ ಪಿಎಚ್.ಡಿ ಮಹಾಪ್ರಬಂಧ. ಅಲ್ಲದೆ ಸಮಕಾಲೀನ ಮಹಿಳಾ ಚಳವಳಿಗಳನ್ನು ಸಹ ವಿಶ್ಲೇಷಿಸಿದ ಪ್ರಯತ್ನ ಗಮನಾರ್ಹವಾದುದು.

**೨. ಹಣಮಂತ್ರಾಯ । ಡಿ. ದೇವರಾಜ ಅರಸು ಹಾಗೂ ಕರ್ನಾಟಕದ ರಾಜಕಾರಣ: ಚಿಂತನೆಗಳ ಚಾರಿತ್ರಿಕ ವಿಶ್ಲೇಷಣೆ (೨೦೧೦)**
ಹಿಂದುಳಿದ ಹಾಗೂ ಶೋಷಿತ ಸಮುದಾಯಗಳ ನೇತಾರರೆಂದೇ ಗುರುತಿಸಿಕೊಂಡವರು ಡಿ. ದೇವರಾಜ ಅರಸು ಅವರು. ಕರ್ನಾಟಕದ ಸಾಮುದಾಯಿಕ ನೆಲೆಗಳ ಚರಿತ್ರೆಯಲ್ಲಿ ಹಾಗೂ ರಾಜಕಾರಣದ ಹೊಸ ಪ್ರಯೋಗಗಳಲ್ಲಿ ಅರಸು ಅವರ ಚಿಂತನೆ, ಕೊಡುಗೆಗಳು ಗಂಭೀರವಾದುವು. ಇವುಗಳನ್ನು ಚಾರಿತ್ರಿಕ ಅಧ್ಯಯನದ ಮುಖೇನ ವಿಶ್ಲೇಷಣೆಗೆ ಒಳಗು ಮಾಡಿದ ಪ್ರಯತ್ನದ ಫಲವೇ ಈ ಪಿಎಚ್.ಡಿ ಮಹಾಪ್ರಬಂಧ. ಸಮಕಾಲೀನ ರಾಜಕಾರಣದ ನೆಲೆಗಳನ್ನು ಚರ್ಚಿಸುವ ಅನೇಕ ಅಂಶಗಳು ಈ ಅಧ್ಯಯನದಲ್ಲಿವೆ.

**೩. ಆರ್. ಸುಮನ । ವಸಾಹತುಶಾಹಿ ಕಾಲಘಟ್ಟದ ಕನ್ನಡ ಭೂಪ್ರದೇಶಗಳ ಗ್ಯಾಜೆಟಿಯರುಗಳ ಚಾರಿತ್ರಿಕ ಅಧ್ಯಯನ (೨೦೧೨)**
ವಿಭಜಿತ ಕನ್ನಡ ಭೂಪ್ರದೇಶಗಳಲ್ಲಿನ ವಸಾಹತುಶಾಹಿ ಮೂಸೆಯಿಚಿದ ಅಂದಿನ ಗ್ಯಾಜೆಟಿಯರುಗಳನ್ನು ಕುರಿತಾದ ಸಂಶೋಧನೆ. ಇದರಲ್ಲಿ ದೇಶೀಯ ಗ್ಯಾಜೆಟಿಯರುಗಳನ್ನು ಸಹ ಪರಿಶೀಲಿಸಲಾಗಿದೆ.

**೪. ಬಿ.ಸಿ.ಸವಿತ । ಪ್ರೊ. ಎಂ.ಡಿ. ನಂಜುಂಡಸ್ವಾಮಿ ಅವರ ಹೋರಾಟ ಹಾಗೂ ಚಿಂತನೆಗಳ ಚಾರಿತ್ರಿಕ ವಿಶ್ಲೇಷಣೆ (೨೦೧೫)**
ನಾಡು ಕಂಡ ರೈತ ಹೋರಾಟಗಾರರಾದ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಅವರ ರೈತ ಪರವಾದ ಚಿಂತನೆಗಳು ಹಾಗೂ ರೈತ ಚಳವಳಿಗಳನ್ನು ಕುರಿತ ಪಿಎಚ್.ಡಿ ಅಧ್ಯಯನ. ಸಂಶೋಧಕರು ಕರ್ನಾಟಕದ ರೈತ ಹೋರಾಟಗಳನ್ನು ಪ್ರೊ. ಎಂ.ಡಿ. ನಂಜುಂಡಸ್ವಾಮಿ ಅವರನ್ನು ಕೇಂದ್ರೀಕರಿಸಿ ಚಾರಿತ್ರಿಕ ಅಧ್ಯಯನ ಹಾಗೂ ವಿಶ್ಲೇಷಣೆಗಳೊಂದಿಗೆ ಮಂಡಿಸಿರುವ ರೀತಿ ಅನನ್ಯವಾಗಿದೆ. ಬಹುಶಃ ಪ್ರೊ. ಎಂಡಿಎನ್ ಹಾಗೂ ರೈತ ಹೋರಾಟಗಳನ್ನು ಕುರಿತು ಮಂಡಿಸಲಾದ ಮೊಟ್ಟಮೊದಲ ಪಿಎಚ್.ಡಿ ಅಧ್ಯಯನ ಇದಾಗಿರುತ್ತದೆ.

**೫. ಶ್ರೀನಿವಾಸರಾಜು । ಡಾ.ರಾಜಕುಮಾರ್ ಹಾಗೂ ಕನ್ನಡದ ಅಸ್ಮಿತೆಯ ಹುಡುಕಾಟಗಳು (೨೦೧೬)**
ಈ ಮಹಾಪ್ರಬಂಧವು ಕನ್ನಡ ಚಲನಚಿತ್ರ ನಟರಾದ ರಾಜಕುಮಾರ್ ಅವರನ್ನು ಕೇಂದ್ರವಾಗಿರಿಸಿಕೊಂಡ ಸಾಂಸ್ಕೃತಿಕ ಅಧ್ಯಯನ. ಜನಪ್ರಿಯ ಸಂಸ್ಕೃತಿ ಮತ್ತು ಇಂಥ ಸಂಸ್ಕೃತಿಯ ಪ್ರತಿಭೆಯನ್ನು ರೂಪಿಸಿದ ಏಕೀಕೃತ ಕರ್ನಾಟಕದ ವಿದ್ಯಮಾನಗಳು ಹೇಗೆ ಕನ್ನಡ ಸಂವೇದನೆಯನ್ನು ಅಂತರ್ಗತ ಮಾಡಿಕೊಂಡಿವೆ ಹಾಗೂ ಕನ್ನಡ ಸಮುದಾಯಗಳ ಮನಸ್ಥಿತಿಯನ್ನು ಪ್ರಭಾವಿಸಿವೆ ಎಂದು ರಾಜಕುಮಾರ್ ಅವರ ಮೂಲಕ ಅರಿಯುವ, ಅರಸುವ ಯತ್ನ.

೧೮. **ಎಂ.ಫಿಲ್ ಮಾರ್ಗದರ್ಶನ**

**ಅಭ್ಯರ್ಥಿಗಳ ಹೆಸರು । ಎಂ.ಫಿಲ್ ನಿಬಂಧದ ಶೀರ್ಷಿಕೆ (ಪದವಿ ಘೋಷಿಸಿದ ದಿನಾಂಕ)**

**೧. ಗಂಗಾಧರ । ಎಂ.ವಿಶ್ವೇಶ್ವರಯ್ಯ ಮತ್ತು ಗಾಂಧಿಯವರ ತಾತ್ವಿಕ ಚಿಂತನೆಗಳ ತೌಲನಿಕ ಅಧ್ಯಯನ (೨೦೦೩)**
ನಾಡು ಅಥವಾ ರಾಷ್ಟ್ರದ ಪ್ರಗತಿಯ ವಿಚಾರಗಳಲ್ಲಿ ಗಂಭೀರ ಒಳನೋಟಗಳನ್ನು ಪರಿಶೀಲಿಸುವ ಪ್ರಯತ್ನ. ಒಂದೇ ಆಶಯಕ್ಕಾಗಿ ಗಾಂಧಿ ಹಾಗೂ ವಿಶ್ವೇಶ್ವರಯ್ಯನವರು ಹಾದುಹೋದ ಮಾರ್ಗಗಳು ಭಿನ್ನ. ಈ ಭಿನ್ನತೆಯ ಮಾರ್ಗಗಳನ್ನು ಅವರ ಚಿಂತನೆಗಳ ಮೂಲಕ ವಿಶ್ಲೇಷಿಸುವ ಮೊದಲ ಪ್ರಯತ್ನವೇ ಈ ನಿಬಂಧ.

**೨. ಹಣಮಂತ್ರಾಯ ದೊಡ್ಡಮನಿ । ಡಿ.ದೇವರಾಜ ಅರಸು ಚಿಂತನೆಗಳ ವಿಶ್ಲೇಷಣೆ (೨೦೦೫)**
ಕರ್ನಾಟಕದ ಪ್ರತಿಭಾನ್ವಿತ ಮುಖ್ಯಮಂತ್ರಿಗಳಲ್ಲಿ ಒಬ್ಬರಾದ ಡಿ.ದೇವರಾಜ ಅರಸು ಅವರ ಚಿಂತನೆ, ಚಟುವಟಿಕೆಗಳನ್ನು ಕೇಂದ್ರೀಕರಿಸಿಕೊಂಡು ವಿಶ್ಲೇಷಿಸಲಾದ ಎಂ.ಫಿಲ್ ನಿಬಂಧ. ರಾಜಕಾರಣದ ನೆಲೆಗಳಲ್ಲಿ ಅರಸು ಅವರ ವ್ಯಕ್ತಿತ್ವ ಹಾಗೂ ಚಿಂತನೆಗಳನ್ನು ಪರಿಶೀಲಿಸಲಾಗಿದೆ.

**೩. ಉಮಾದೇವಿ । ಪ್ರೊ.ಬಿ.ಕೃಷ್ಣಪ್ಪ: ದಲಿತ ಚಿಂತನೆಗಳ ವಿಶ್ಲೇಷಣೆ (೨೦೦೭)**
ದಲಿತ ಚಳವಳಿ ಹಾಗೂ ಸಂಘಟನೆಗಳಿಗೆ ತಾತ್ವಿಕ ತಳಹದಿಯನ್ನು ಹಾಕಿಕೊಟ್ಟು ಸ್ವಾಭಿಮಾನವನ್ನು ಮೂಡಿಸಿದವರು ಪ್ರೊ. ಬಿ.ಕೃಷ್ಣಪ್ಪ. ಅವರ ಚಿಂತನೆಗಳನ್ನು ಹಾಗೂ ಸಮಕಾಲೀನ ಸಂದರ್ಭದ ದಲಿತರ ಹೋರಾಟಗಳನ್ನು ಮೇಳೈವಿಸಿ ಚಾರಿತ್ರಿಕವಾಗಿ ವಿಶ್ಲೇಷಿಸಿದ ಎಂ.ಫಿಲ್ ನಿಬಂಧ ಇದಾಗಿದೆ.

**೪. ಮಂಜುನಾಥಸ್ವಾಮಿ । ಸಿರಾದ ನವಾಬರು (೨೦೦೭)**
ಅಲಕ್ಷಿತ ನೆಲೆಗಳಲ್ಲಿ ಮೂಲೆಗುಂಪಾದವರ ಪೈಕಿ ತುಮಕೂರಿನ ಸಿರಾದ ನವಾಬರೂ ಸಹ ಪ್ರಮುಖರು. ನಾಡಿನ ಚರಿತ್ರೆಯಲ್ಲಿ ತಮ್ಮದೇ ಕೊಡುಗೆಗಳ ಮುಖೇನ ಗಮನಸೆಳೆದ ಸಿರಾದ ನವಾಬರನ್ನು ಕುರಿತು ಮೊದಲ ಬಾರಿಗೆ ಚಾರಿತ್ರಿಕ ವಿಶ್ಲೇಷಣೆ ಮಾಡಿದ ಎಂ.ಫಿಲ್ ನಿಬಂಧ.

**೫. ನಾಗರತ್ನ । ವಿದೇಶಿ ಕಥನಗಳಲ್ಲಿ ವಿಜಯನಗರ ಕಾಲದ ಮಹಿಳೆ (೨೦೦೭)**
ವಿಜಯನಗರ ಕಾಲಘಟ್ಟದ ಚರಿತ್ರೆಯ ಅಧ್ಯಯನಗಳಲ್ಲಿ ಅಂದಿನ ಮಹಿಳೆಯರನ್ನು ಕುರಿತು ಸಮಗ್ರವಾದ ಅಧ್ಯಯನಗಳು ಆಗಿಲ್ಲ. ಆಗಿರುವ ಕೆಲವೇ ಅಧ್ಯಯನಗಳಲ್ಲಿ ವಿದೇಶಿ ಬರೆಹಗಳನ್ನು ತೌಲನಿಕವಾಗಿ ಬಳಸಿಲ್ಲ. ಈ ಕೊರತೆಯನ್ನು ನೀಗಲು ಮಾಡಿದ ಮೊದಲ ಪ್ರಯತ್ನವಾಗಿ ಈ ಎಂ.ಫಿಲ್ ನಿಬಂಧ ರೂಪ ತಳೆದಿದೆ. ರಾಣಿಯರ ಮೂಲಕವೂ ವಂಶಾವಳಿಯನ್ನು ಪರಿಶೀಲಿಸಲು ಸಾಧ್ಯವಿದೆ ಎಂಬುದನ್ನು ರುಜುವಾತುಪಡಿಸಿದ ನಿಬಂಧ.

**೬. ಎಂ.ನಾರಾಯಣಸ್ವಾಮಿ । ಗೋಕಾಕ್ ಚಳವಳಿ: ಡಾ.ರಾಜಕುಮಾರ್ ಅವರ ಪಾತ್ರವನ್ನು ಕುರಿತ ವಿಶ್ಲೇಷಣೆ ( ೨೦೦೮)**
ಕನ್ನಡದ ವರನಟ, ಮೇರುನಟ ಮೊದಲಾದ ವಿಶೇಷಣಗಳ ಮುಖೇನ ಗುರುತಿಸಲ್ಪಟ್ಟವರು ಡಾ.ರಾಜಕುಮಾರ್. ಹೈಸ್ಕೂಲ್ ತರಗತಿಗಳಲ್ಲಿ ಕನ್ನಡದ ಸ್ಥಾನ-ಮಾನಗಳನ್ನು ಪರಿಶೀಲಿಸಲು ರಚಿಸಲಾದ ಪ್ರೊ.ಗೋಕಾಕ್ ಅವರ ನೇತೃತ್ವದ ಸಮಿತಿಯು ನೀಡಿದ ವರದಿ ಅನೇಕ ವಾದ-ವಿವಾದಗಳಿಗೆ ಎಡೆಮಾಡಿಕೊಟ್ಟಿತು. ಏಕೀಕರಣದ ನಂತರ ದೊಡ್ಡ ಚಳವಳಿಯೊಂದು ರೂಪುತಳೆಯಿತು. ಇದಕ್ಕೆ ಎಲ್ಲಿಲ್ಲದ ಬಲ ಬರಲು ಕಾರಣರಾದ ರಾಜಕುಮಾರ್ ಅವರ ಪ್ರವೇಶ ಅಧ್ಯಯನಯೋಗ್ಯವಾದುದು. ಈ ದಿಸೆಯಲ್ಲಿ ಅವರ ಪಾತ್ರವನ್ನು ಕುರಿತ ವಿಶ್ಲೇಷಣೆಯೇ ಪ್ರಸ್ತುತ ಎಂ.ಫಿಲ್ ನಿಬಂಧ. ನಾಡಿನ ಚರಿತ್ರೆಯಲ್ಲಿ ಸೇರಬಹುದಾದ ಈ ಚಳವಳಿಯನ್ನು ಕುರಿತ ಅಧ್ಯಯನ ತನ್ನದೇ ಆದ ಒಳನೋಟಗಳೊಂದಿಗೆ ಮೂಡಿಬಂದಿದೆ.

**೭. ಶಿವಕುಮಾರಿ. ಎಂ.ಎಸ್ । ೧೯೨೮ರ ಸುಲ್ತಾನ್ ಪೇಟೆಯ ಗಣಪತಿ ಗಲಭೆ: ಚಾರಿತ್ರಿಕ ಪರಿಶೀಲನೆ (೨೦೦೯)**
ಹಳೆಯ ಮೈಸೂರು ಸಂಸ್ಥಾನದ ಮೊಟ್ಟ ಮೊದಲ ಕೋಮುಗಲಭೆಯೆಂದೇ ಪ್ರತೀತಿ ಪಡೆದದ್ದು ೧೯೨೮ರ ಸುಲ್ತಾನ್ ಪೇಟೆ (ಬೆಂಗಳೂರು) ಯ ಗಣಪತಿ ಗಲಭೆ. ಈ ಕುರಿತ ದಿವಾನ್ ಮಿರ್ಜಾ ಇಸ್ಮಾಯಿಲ್‌ರ ಆಡಳಿತದ ಸ್ಥಿತ್ಯಂತರಗಳನ್ನು ಪರಿಶೀಲಿಸುವ ಪ್ರಯತ್ನವಾಗಿ ನಿಬಂಧ ಮೂಡಿಬಂದಿದೆ.

**೮. ಸವಿತ ಬಿ.ಸಿ. । ರೈತ ಹೋರಾಟಗಾರ ಪ್ರೊ.ಎಂ.ಡಿ.ನಂಜುಂಡಸ್ವಾಮಿ ಚಿಂತನೆಗಳ ವಿಶ್ಲೇಷಣೆ (೨೦೦೯)**
ನಾಡಿನ ಸಾಂಸ್ಕೃತಿಕ ಹೋರಾಟಗಳ ಹಿನ್ನೆಲೆಯಲ್ಲಿ ಅದರಲ್ಲೂ ರೈತ ಹಾಗೂ ಕಾರ್ಮಿಕರ ಬವಣೆಗಳನ್ನೇ ಕೇಂದ್ರೀಕರಿಸಿಕೊಂಡು ರೂಪುತಳೆದವರು ಪ್ರೊ.ಎಂ.ಡಿ.ನಂಜುಂಡಸ್ವಾಮಿ. ಕನ್ನಡದ ಅಪ್ಪಟ ಚಿಂತನೆಗಳನ್ನೇ ಮೌಲ್ಯಗಳನ್ನಾಗಿಸಿಕೊಂಡ ಎಂ.ಡಿ.ಎನ್ ಅವರ ಬದುಕು ಹಾಗೂ ಹೋರಾಟಗಳ ಹಿನ್ನೆಲೆಯಲ್ಲಿ ಪರಿಶೀಲಿಸಿದ ಎಂ.ಫಿಲ್ ನಿಬಂಧ. ಫಲಿತಗಳಲ್ಲಿ ಹೊಸ ಒಳಹುಗಳ ಕಡೆಗೆ ಗಮನ ಸೆಳವ ಪ್ರಯತ್ನ ಈ ಅಧ್ಯಯನದ್ದು.

**೯. ಅಯ್ಯಾಳಿ ಯರಿಸ್ವಾಮಿ । ಹಂಪಿ ಪರಿಸರದ ಐತಿಹ್ಯಗಳು: ಚಾರಿತ್ರಿಕ ವಿಶ್ಲೇಷಣೆ (೨೦೧೦)**
ಹಂಪಿ ಪರಿಸರದ ಮೌಖಿಕ ಹಾಗೂ ಲಿಖಿತ ಆಕರಗಳಲ್ಲಿನ ಐತಿಹ್ಯಗಳು ಕುರಿತ ಸಂಶೋಧನೆ. ವ್ಯಕ್ತಿ, ಸ್ಥಳ, ಘಟನೆ, ಭೌತಿಕ ನೆಲೆಗಳಲ್ಲಿನ ಐತಿಹ್ಯಗಳನ್ನು ಕುರಿತು ಚಾರಿತ್ರಿಕವಾಗಿ ವಿಶ್ಲೇಷಿಸಿದ ಎಂ.ಫಿಲ್ ನಿಬಂಧ.

**೧೦. ಮಾರುತಿ ಕೆ.ಎಸ್. । ರಾಬರ್ಟ್ ಸಿವೆಲ್ ಅವರ ಚಾರಿತ್ರಿಕ ಬರೆಹಗಳ ವಿಶ್ಲೇಷಣೆ (೨೦೧೦)**
ವಿಜಯನಗರ ಸಾಮ್ರಾಜ್ಯವನ್ನು ಕುರಿತ ಪ್ರಮುಖ ಆಕರವೆನ್ನಿಸಿದ 'ದಿ ಫಾರ್ಗ್ಗಾಟನ್ ಎಂಪೈರ್' ಕೃತಿ ಹಾಗೂ ಇತರೆ ಬರೆಹಗಳನ್ನು ಕುರಿತ ಚಾರಿತ್ರಿಕ ವಿಶ್ಲೇಷಣೆಗಳ ನಿಬಂಧ. ಇದರಲ್ಲಿ ರಾಬರ್ಟ್ ಸಿವೆಲ್‌ನ ವಸಾಹತು ಹಾಗೂ ಸಾಮ್ರಾಜ್ಯಶಾಹಿ ಧೋರಣೆಗಳನ್ನು ಕುರಿತು ವಿಶ್ಲೇಷಿಸಿದೆ.

**೧೧. ಜಗದೀಶ್ ಪಿ.ಎಂ. । ತುಂಗಭದ್ರಾ ಅಣೆಕಟ್ಟು: ಒಂದು ಚಾರಿತ್ರಿಕ ಅಧ್ಯಯನ (೨೦೧೧)**
ಕರ್ನಾಟಕದ ಜೀವನದಿಗಳೆನಿಸಿದ ತುಂಗೆ ಹಾಗೂ ಭದ್ರೆಗಾಗಿ ನಿರ್ಮಿಸಲಾದ ಹೊಸಪೇಟೆಯ ತುಂಗಭದ್ರಾ ಅಣೆಕಟ್ಟನ್ನು ಕುರಿತ ಚಾರಿತ್ರಿಕ ಅಧ್ಯಯನ.

**೧೨. ರಾಜಕುಮಾರ್.ಡಿ.ಎಸ್. । ಟಿ.ಮರಿಯಪ್ಪ ಹಾಗೂ ಕರ್ನಾಟಕದ ರಾಜಕಾರಣ (೨೦೧೨)**
ಕರ್ನಾಟಕದ ರಾಜಕಾರಣವು ಕಂಡ ಪ್ರತಿಭಾನ್ವಿತ ರಾಜಕಾರಣಿಗಳಲ್ಲಿ ಒಬ್ಬರಾದ ಟಿ.ಮರಿಯಪ್ಪ ಅವರ ಬದುಕು ಹಾಗೂ ರಾಜಕಾರಣವನ್ನು ವಿಶ್ಲೇಷಿಸುವ ಎಂ.ಫಿಲ್ ನಿಬಂಧ.

೧೯. **ಪಿಎಚ್.ಡಿ ಮಾರ್ಗದರ್ಶನ**

**೧. 'ರನ್ನ ಸಾಹಿತ್ಯ ಪ್ರಶಸ್ತಿ–೨೦೦೦'**
ಬೆಂಗಳೂರಿನ ಅತ್ತಿಮಬ್ಬೆ ಪ್ರತಿಷಾದೆ (ರಿ), ಇವರ ೨೦೦೦ನೆಯ ಸಾಲಿನ 'ರನ್ನ ಸಾಹಿತ್ಯ ಪ್ರಶಸ್ತಿ'ಯನ್ನು 'ಕನ್ನಡ ಚಳವಳಿಗಳು' ಎಂಬ ಅಧ್ಯಯನ ಪುಸ್ತಕಕ್ಕೆ ನೀಡಿ ಗೌರವಿಸಿದ್ದಾರೆ.

**೨. 'ಸರ್.ಎಂ.ವಿಶ್ವೇಶ್ವರಯ್ಯ ಪ್ರಶಸ್ತಿ–೨೦೦೧'**
'ಸರ್.ಎಂ.ವಿಶ್ವೇಶ್ವರಯ್ಯ ಪ್ರಶಸ್ತಿ'ಯನ್ನು 'ಕನ್ನಡ ಚಳವಳಿಗಳು' ಕೃತಿ ಹಾಗೂ ನಾಡು–ನುಡಿಗಳಿಗಾಗಿ ಸಂಶೋಧನೆ ಮಾಡುತ್ತಿರುವ, ಕೃತಿಗಳನ್ನು ಪ್ರಕಟಿಸಿರುವ ಹಿನ್ನೆಲೆಯಲ್ಲಿ ನೀಡಿ ಗೌರವಿಸಿದ್ದಾರೆ. ಈ ಪ್ರಶಸ್ತಿಯನ್ನು ಬೆಂಗಳೂರಿನ ಸುರ್ವೆ ಕಲ್ಚರಲ್ ಅಕಾಡೆಮಿಯವರು ಪ್ರತಿವರ್ಷವೂ ನೀಡಿ ಗೌರವಿಸುತ್ತಿದ್ದಾರೆ.

**೩. ಏಷ್ಯಾ ಬರಹಗಾರರ ಪಟ್ಟಿಯಲ್ಲಿ ಹೆಸರು ನಮೂದು–೨೦೦೨**
'ಏಷಿಯನ್ ಹೂಸ್ ಹೂ?' ಎಂಬ ಲೇಖಕ, ಸಾಹಿತಿಗಳ ಪಟ್ಟಿಯಲ್ಲಿ ನನ್ನ ಹೆಸರು ಹಾಗೂ ವ್ಯಕ್ತಿಗತ ವಿವರಗಳನ್ನು ನಮೂದಿಸಿದೆ.

**೪. ಅಮೇರಿಕಾದ ಬರಹಗಾರರ ಪಟ್ಟಿಯಲ್ಲಿ ಹೆಸರು ನಮೂದು–೨೦೦೨**
'ಅಮೇರಿಕಾಸ್ ಹೂಸ್ ಹೂ?' ಬರಹಗಾರರ ಕೋಶದಲ್ಲಿ ಹೆಸರನ್ನು ನಮೂದಿಸಿ ಮನ್ನಣೆ ನೀಡಿದೆ.

**೫. 'ಕರುಣಾ ಕಾವ್ಯ' ಸಂಚಿಕೆಯ ಮನ್ನಣೆ**
'ಕರುಣಾ' ನಿಯತಕಾಲಿಕವು ೨೦೦೩–೦೫ರವರೆಗೂ ಅದರ ಗೌರವ ಸಂಪಾದಕರನ್ನಾಗಿ ಮನ್ನಣೆ ನೀಡಿ ಗೌರವಿಸಿದೆ.

**೬. ಚರಿತ್ರೆ ಜ್ಞಾನಶಿಸ್ತಿಗೆ ನೀಡಿದ ಪುರಸ್ಕಾರ–೨೦೦೪**
ಬೆಂಗಳೂರಿನ ಸರ್ಕಾರಿ ಕಲಾ ಕಾಲೇಜಿನ ಹಿರಿಯ ವಿದ್ಯಾರ್ಥಿಗಳ ಸಂಘ ಹಾಗೂ ಅಧ್ಯಾಪಕರ ಮಂಡಳಿ 'ಚರಿತ್ರೆ ಪ್ರಾಧ್ಯಾಪಕ'ನಾಗಿ ಸೇವೆ ಸಲ್ಲಿಸುತ್ತಿರುವುದರ ಬಗೆಗೆ, (ಸಂಶೋಧನಾ ಕ್ಷೇತ್ರದಲ್ಲಿ) ಪ್ರಶಸ್ತಿ ನೀಡಿ ಗೌರವಿಸಿದೆ. ಕಾಲೇಜಿನ ಹಳೆಯ ವಿದ್ಯಾರ್ಥಿಗಳು ಬೇರೆ ಬೇರೆ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವವರನ್ನು ಗಮನದಲ್ಲಿಟ್ಟುಕೊಂಡು ಈ ಪ್ರಶಸ್ತಿ ನೀಡಲಾಗುತ್ತದೆ.

**೭. ಸರ್ ಎಂ.ವಿ. ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ (೨೦೧೨)**
ಬೆಂಗಳೂರಿನ ಸುರ್ವೆ ಕಲ್ಚರಲ್ ಅಕಾಡೆಮಿ ಅವರು ಭಾರತರತ್ನ ಸರ್ ಎಂ.ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಪ್ರತಿಷ್ಠಾನ(ರಿ)ದಿಂದ ೨೦೧೨ನೆಯ ಸಾಲಿನ ಸರ್ ಎಂ.ವಿ. ರಾಷ್ಟ್ರೀಯ ಸಬ್ಭಾವನಾ ಪ್ರಶಸ್ತಿ.

## ೨೦. ಶೈಕ್ಷಣಿಕ ಉದ್ದೇಶಕ್ಕಾಗಿ (ವಿಶ್ವವಿದ್ಯಾಲಯ ಹೊರತುಪಡಿಸಿ) ನಿರ್ವಹಿಸಿದ ಯೋಜನೆಗಳು

### ೧. ಹಿಸ್ಟರಿ ಆಫ್ ಕಾಂಟೆಂಪರರಿ ಕರ್ನಾಟಕ–೨೦೦೭

ನವದೆಹಲಿಯ ಐ.ಸಿ.ಎಚ್.ಆರ್ ಸಂಸ್ಥೆಯು ಸಮಕಾಲೀನ ಕರ್ನಾಟಕದ ಚರಿತ್ರೆ ರಚನೆಯನ್ನು ಕುರಿತು ಅಧ್ಯಯನ ಮಾಡಲು ರೂ. ೪೦.೦೦೦ಗಳನ್ನು ಅನುದಾನವಾಗಿ ನೀಡಿ ಸಹಕರಿಸಿತು. ಹೀಗಾಗಿ ಇಂಗ್ಲೀಷಿನಲ್ಲಿಯೇ ಈ ಅಧ್ಯಯನ ಪೂರೈಸಿ ಸಲ್ಲಿಸಲಾಗಿದೆ. ಇದರಲ್ಲಿ ನಾಡಿನ ಭಾಷೆ, ಸಂಸ್ಕೃತಿ, ಸಾಹಿತ್ಯದ ನೆಲೆಗಳ ಜೊತೆಗೆ ರಾಜಕಾರಣದ ಹಾಗೂ ಸಮಕಾಲೀನ ವಾದ–ವಿವಾದಗಳನ್ನು ಗಂಭೀರ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಕಿರು ಯೋಜನೆಯು ಅನೇಕ ಫಲಿತಗಳೊಂದಿಗೆ ಪ್ರಕಟಣೆಗೆ ಯೋಗ್ಯವಾಗಿ ಗಮನ ಸೆಳೆದದ್ದು ವಿಶೇಷ.

### ೨. ಚಾರಿತ್ರಿಕ ಕರ್ನಾಟಕ–೨೦೧೦

ಕರ್ನಾಟಕ ಸರ್ಕಾರದ ವಿಧಾನಸಭಾ ಸಚಿವಾಲಯದ ನಾಡಿನ 'ಸುವರ್ಣ ಕರ್ನಾಟಕ'ದ ನೆನಪಿಗಾಗಿ ಹಮ್ಮಿಕೊಳ್ಳಲಾದ ಯೋಜನೆಗಳಲ್ಲಿ ಚಾರಿತ್ರಿಕ ಕರ್ನಾಟಕ ಸಂಪುಟದ ಸಂಪಾದನೆಯೂ ಒಂದು. ಇದರ ಸಂಪಾದಕನಾಗಿ ವಸಾಹಾತುಶಾಹಿ ಕಾಲಘಟ್ಟದಿಂದ ಈ ಹೊತ್ತಿನ ಜ್ವಲಂತ ಸಮಸ್ಯೆಗಳವರೆವಿಗೂ ಅಧ್ಯಯನಗಳನ್ನು ಬರೆಸಿ ಸಂಪಾದಿಸಲಾಗಿದೆ. ಈ ಪ್ರಯತ್ನವು ಆಧುನಿಕ ಕರ್ನಾಟಕದ ಚರಿತ್ರೆಗೆ ಹೊಸ ಸೇರ್ಪಡೆ. ಅನೇಕ ಒಳನೋಟಗಳೊಂದಿಗೆ ಪ್ರಕಟಣೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಇದರ ಪ್ರಧಾನ ಸಂಪಾದಕರು ಡಾ.ಚಂದ್ರಶೇಖರ ಕಂಬಾರ ಅವರು. ಯೋಜನೆಯ ಅಧ್ಯಕ್ಷರಾಗಿ ಮಾನ್ಯ ಸಭಾಪತಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.

### ೩. ಯೂನಿಫಿಕೇಷನ್ ಮೂಮೆಂಟ್ ಆಫ್ ಕರ್ನಾಟಕ–೨೦೦೮

ಮೈಸೂರಿನ 'ಭಾರತೀಯ ಭಾಷೆಗಳ ಭಾಷಾ ಸಂಸ್ಥಾನ'ವು (ಸಿಐಐಎಲ್) 'ಭಾಷಾ ಮಂದಾಕಿನಿ' ಯೋಜನೆಯಡಿಯಲ್ಲಿ ಇಂಗ್ಲೀಷಿನಲ್ಲಿ ನಾಡಿನ 'ಏಕೀಕರಣ ಚಳವಳಿ'ಯನ್ನು ಕುರಿತ ಸಾಕ್ಷ್ಯಚಿತ್ರವನ್ನು ತಯಾರಿಸಲು ರೂಪಿಸಿದ ಯೋಜನೆ. ಈ ಯೋಜನೆಗಾಗಿ ಸಲ್ಲಿಸಿದ ಹಸ್ತಪ್ರತಿಯು ಈಗಾಗಲೇ ಕನ್ನಡದಲ್ಲಿ 'ಕರ್ನಾಟಕ ಏಕೀಕರಣ ಚಳವಳಿ' ಶೀರ್ಷಿಕೆಯಡಿಯಲ್ಲಿ ಡಿ.ವಿ.ಡಿ ರೂಪದಲ್ಲಿ ಮಾರಾಟಕ್ಕಾಗಿ ಬಿಡುಗಡೆಯಾಗಿದೆ.

## ೨೧. ನಿರ್ವಹಿಸಿದ ಇತರೆ ಕೆಲಸಗಳು

### ೧. ಆಡಳಿತಾತ್ಮಕ ಕೆಲಸಗಳು

ಅ. ಕನ್ನಡ ವಿಶ್ವವಿದ್ಯಾಲಯದ 'ಸಹಾಯಕ ಕುಲಸಚಿವ'ರಾಗಿ ಕಾರ್ಯನಿರ್ವಹಣೆ: ೧೯೯೬

ಆ. ಕನ್ನಡ ವಿಶ್ವವಿದ್ಯಾಲಯದಲ್ಲಿ 'ಯೋಜನಾಧಿಕಾರಿ'ಯಾಗಿ ಕಾರ್ಯನಿರ್ವಹಣೆ: ೧೯೯೬

ಇ. ಚರಿತ್ರೆ 'ವಿಭಾಗದ ಮುಖ್ಯಸ್ಥ'ರಾಗಿ ಎರಡು ಅವಧಿಗಳಿಗೆ ಕಾರ್ಯನಿರ್ವಹಣೆ: ೨೦೦೩–೦೫

ಈ. ನಾಡೋಜ ಡಾ.ರಾಜಕುಮಾರ್ ಅಧ್ಯಯನ ಪೀಠದ ಸಂಚಾಲಕರಾಗಿ ಎರಡು ವರುಷಗಳ ಅವಧಿಗೆ ಕಾರ್ಯನಿರ್ವಹಣೆ: ೨೦೦೭–೦೯

ಊ. ಯು.ಜಿ.ಸಿ ಪುನರ್ ಮನನ ಶಿಬಿರದ ಸಂಚಾಲಕರಾಗಿ ಕಾರ್ಯನಿರ್ವಹಣೆ: ೨೦೦೨

### ೨. ಹೆಚ್ಚಿನ ಜವಾಬ್ದಾರಿಗಳು

ಅ. ಮಾನ್ಯ ರಾಜ್ಯಪಾಲರ ನಾಮನಿರ್ದೇಶಿತ ಆಯ್ಕೆ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಣೆ.

ಆ. ಕರ್ನಾಟಕ ಇತಿಹಾಸ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಣೆ: ೨೦೦೫–೦೭

ಇ. ವಿವಿಧ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಂಡಳಿ ಸದಸ್ಯರಾಗಿ ಕಾರ್ಯನಿರ್ವಹಣೆ.

ಈ. ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪರೀಕ್ಷಾ ಮಂಡಳಿಯ ಸದಸ್ಯರಾಗಿ ಕಾರ್ಯನಿರ್ವಹಣೆ.

ಉ. ಕರ್ನಾಟಕ ಲೋಕಸೇವಾ ಆಯೋಗದ ಉನ್ನತ ಪರೀಕ್ಷಾ ಮಂಡಳಿಯ ಸದಸ್ಯರಾಗಿ ಕಾರ್ಯನಿರ್ವಹಣೆ.

ಊ.ನವದೆಹಲಿಯ ಸಿ.ಬಿ.ಎಸ್.ಇ ನಡೆಸುವ ಪರೀಕ್ಷೆಗಳ ಮೇಲ್ವಿಚಾರಕರಾಗಿ ಕಾರ್ಯನಿರ್ವಹಣೆ: ೨೦೧೨–೧೪